ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ
ಬಳ್ಳಾರಿ,
ಕೊಪ್ಪಳ,
ಯಾದಗಿರಿ,
ರಾಯಚೂರು,
ಕಲಬುರ್ಗಿ,
ಬೀದರ,
ವಿಜಯನಗರ
ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 104 RNI Number : KNKAN/25/A2770 23-04-2026 Thursday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :104 ರಾಯಚೂರು 23-04-2026 ಗುರುವಾರ ಪುಟ 04 ಬೆಲೆ ರೂ.2/- ಮೊ:8660146563

ಪ್ರಧಾನಿಯನ್ನು ಟೆರರಿಸ್ಟ್ ಎಂದ ಖರ್ಗೆ ಕ್ಷಮೆ ಯಾಚನೆಗೆ ಬಿಜೆಪಿ ಆಗ್ರಹ

ಹೈದರಾಬಾದ್, ಏ. 22 (ಪಿಟಿಐ) ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಎಐಸಿಸಿ ಮುಖ್ಯಸ್ಥ ಮಲ್ಲಿಕಾರ್ಜುನ ಖರ್ಗೆ ಅವರ ಭಯೋತ್ಪಾದಕ ಹೇಳಿಕೆಗೆ ಕೇಂದ್ರ ಕಲ್ಲಿದ್ದಲು ಸಚಿವ ಜಿ ಕಿಶನ್ ರೆಡ್ಡಿ ಅವರು, ಇಂತಹ ದ್ವೇಷಭರಿತ ಟೀಕೆಗಳನ್ನು ಕಾಂಗ್ರೆಸ್ ಹೈಕಮಾಂಡ್ ಮತ್ತು ಅದರ ನಾಯಕ ರಾಹುಲ್ ಗಾಂಧಿ ನಿರ್ದೇಶಿಸಿದ್ದಾರೆಯೇ ಎಂದು ಪ್ರಶ್ನಿಸಿದ್ದಾರೆ.

ಖರ್ಗೆ ತಮ್ಮ ಹೇಳಿಕೆಗಳಿಗೆ ದೇಶದ ಜನರಲ್ಲಿ ಬೇಷರತ್ತಾಗಿ ಕ್ಷಮೆಯಾಚಿಸಬೇಕು ಎಂದು ಅವರು ಒತ್ತಾಯಿಸಿದರು.ಪ್ರಜಾಪ್ರಭುತ್ವದಿಂದ ಆಯ್ಕೆಯಾದ ಪ್ರಧಾನಿಯನ್ನು ಭಯೋತ್ಪಾದಕ ಎಂದು ಕರೆಯುವುದು ಕೇವಲ ಬೇಜವಾಬ್ದಾರಿಯಲ್ಲ, ಆದರೆ ಉದ್ದೇಶಪೂರ್ವಕ ಮತ್ತು ಅವರ ಮೇಲೆ ನಂಬಿಕೆ ಇಟ್ಟಿರುವ 1.47 ಶತಕೋಟಿ ದೇಶವಾಸಿಗಳಿಗೆ ಮಾಡಿದ ಅವಮಾನ ಎಂದಿದ್ದಾರೆ.

ಈ ರೀತಿಯ ಭಾಷೆ ರಾಜಕೀಯ ಚರ್ಚೆಯನ್ನು ಕೆಳಮಟ್ಟಕ್ಕೆ ಇಳಿಸುತ್ತದೆ ಎಂದು ಅವರು ಹೇಳಿದರು.ಕಾಂಗ್ರೆಸ್ ಮತ್ತು ಅದರ ನಾಯಕರು ದೇಶದ ಚುನಾಯಿತ ಮತ್ತು ಪ್ರೀತಿಯ ಪ್ರಧಾನಿಯನ್ನು ಅವಮಾನಿಸುತ್ತಿರುವುದು ಇದೇ



ಮೊದಲಲ್ಲ. ಕಾಂಗ್ರೆಸ್‌ನ ಅತ್ಯುನ್ನತ ಶ್ರೇಣಿ ಮತ್ತು ಅದರ ನಾಯಕ ರಾಹುಲ್ ಗಾಂಧಿಯಿಂದ ಪ್ರಧಾನಿ ಮೋದಿ ಅವರ ಮೇಲಿನ ದ್ವೇಷಭರಿತ ಟೀಕೆಗಳು ಕೆಳಮಟ್ಟದ್ದೇ? ಎಂದು ರೆಡ್ಡಿ ಎಕ್ಸ್ ಪೋಸ್ಟ್‌ನಲ್ಲಿ ಕೇಳಿದ್ದಾರೆ.

ಪ್ರಧಾನಿ ಮೋದಿ ಅವರನ್ನು ಭಯೋತ್ಪಾದಕ ಎಂದು ಕರೆಯುವುದು ರಾಜಕೀಯವಲ್ಲ, ಬದಲಾಗಿ ಸೋತ ಮನಸ್ಥಿತಿಯ ಹತಾಶೆ ಎಂದು ಕೇಂದ್ರ ಗೃಹ ಖಾತೆ ರಾಜ್ಯ ಸಚಿವ (ಗೃಹ) ಬಂಡಿ ಸಂಜಯ್ ಕುಮಾರ್ ಹೇಳಿದರು.ಎಐಸಿಸಿ ಅಧ್ಯಕ್ಷರ ಹೇಳಿಕೆಗಳಿಗೆ ಕಾಂಗ್ರೆಸ್ ತಕ್ಷಣ ಕ್ಷಮೆಯಾಚಿಸಬೇಕು ಎಂದು ಅವರು ಹೇಳಿದರು.ಕಾಂಗ್ರೆಸ್ ತನ್ನ ಸಮತೋಲನವನ್ನು ಕಳೆದುಕೊಂಡಿದೆ ಎಂದು ಹೇಳಿದ ಕುಮಾರ್ ಅವರು, ಈ ಹೇಳಿಕೆಗಳು ಕೇವಲ ರಾಜಕೀಯ ದಾಳಿಯಲ್ಲ, ಬದಲಾಗಿ ಭಾರತೀಯ ಪ್ರಜಾಪ್ರಭುತ್ವದ ಆತ್ಮದ ಮೇಲಿನ ದಾಳಿ ಎಂದು ಹೇಳಿದರು.

ಭಯೋತ್ಪಾದಕರಿಗಾಗಿ ಕಣ್ಣೀರು ಹಾಕುತ್ತಿದ್ದ ಮತ್ತು ನಮ್ಮ ಸೈನ್ಯದ ಶೌರ್ಯವನ್ನು ಪ್ರಶ್ನಿಸಿದ ಅದೇ ಕಾಂಗ್ರೆಸ್ ಇದೇ ಎಂದು ಅವರು ಹೇಳಿದರು.ದಶಕಗಳ ಕಾಲ, ನೀವು ಭಯೋತ್ಪಾದನೆಯನ್ನು ಸಮಾಧಾನಪಡಿಸುವ ನೆಪದಲ್ಲಿ ಈ ದೇಶವನ್ನು ರಕ್ತಸಿಕ್ತಗೊಳಿಸಲು ಬಿಟ್ಟಿದ್ದೀರಿ. ಇಂದು, ಪ್ರಧಾನಿ ಮೋದಿ ಅವರು ಆ ಮೃದು-ಭಯೋತ್ಪಾದನಾ ಯುಗವನ್ನು ಕೊನೆಗೊಳಿಸಿದ್ದರಿಂದ, ನೀವು ಹತಾಶೆಗೊಂಡಿದ್ದೀರಿ ಎಂದು ಅವರು ಎಕ್ಸ್ ಮಾಡಿದ್ದಾರೆ.

2016 ರ ಸರ್ಜಿಕಲ್ ಸ್ಟ್ರೈಕ್‌ಗಳಿಂದ 2019 ರ ಬಾಲಕೋಟ್ ವೈಮಾನಿಕ ದಾಳಿಯಿಂದ ಹಿಡಿದು ಆಪರೇಷನ್ ಸಿಂಧೂರ್‌ವರೆಗೆ, ಕಾಂಗ್ರೆಸ್ ಪದೇ ಪದೇ ಶತ್ರು ನಿರೂಪಣೆಗಳನ್ನು ಪ್ರತಿಧ್ವನಿಸಿತು, ನಮ್ಮ ಸೈನಿಕರಿಂದ ಪುರಾವೆಗಳನ್ನು ಕೋರಿತು ಮತ್ತು ರಾಷ್ಟ್ರೀಯ ಭಾವನೆಯಿಂದ ಸಂಪರ್ಕ ಕಡಿತಗೊಂಡಿತು ಎಂದು ಅವರು ಹೇಳಿದರು.

ಖರ್ಗೆ ಅವರು ಪ್ರಧಾನಿ ಮೋದಿ ವಿರೋಧ ಪಕ್ಷಗಳನ್ನು ಹತ್ತಿಕ್ಕಲು ಸರ್ಕಾರಿ ಯಂತ್ರೋಪಕರಣಗಳು ಮತ್ತು ಕೇಂದ್ರ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಳ್ಳುವ ಮೂಲಕ ರಾಜಕೀಯ ಪಕ್ಷಗಳನ್ನು ಭಯೋತ್ಪಾದನೆ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಚೆನ್ನೈನಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ಅವರೊಂದಿಗೆ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಖರ್ಗೆ, ಎಐಎಡಿಎಂಕೆ ಬಿಜೆಪಿ ಜೊತೆಗಿನ ಮೈತ್ರಿಯನ್ನು ಟೀಕಿಸುವಾಗ ಪ್ರಧಾನಿಯನ್ನು ಭಯೋತ್ಪಾದಕ ಎಂದು ಆರಂಭದಲ್ಲಿ ಉಲ್ಲೇಖಿಸಿದರು.

ಮಹಿಳಾ ಸಬಲೀಕರಣಕ್ಕೆ ಸೋಲು ಕಾಂಗ್ರೆಸ್ ಪಕ್ಷಕ್ಕೆ ಕಿಂಚಿತ್ತೂ ಕಾಳಜಿ ಇಲ್ಲ -ಎಂ.ವಿರುಪಾಕ್ಷಿ

ರಾಯಚೂರು, ಏ.22:

ಮಹಿಳೆಯರಿಗೆ ಸಮಾನ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಸಂಸತ್ತಿನಲ್ಲಿ ಮಹಿಳಾ ಮೀಸಲಾತಿ ಬಿಲ್ ಹಾಗೂ ಕ್ಷೇತ್ರ ಪುನರ್‌ವಿಂಗಡಣೆ ಬಿಲ್ ಅನ್ನು ತ್ವರಿತವಾಗಿ ಪಾಸ್ ಮಾಡಬೇಕು ಎಂದು ಜೆಡಿಎಸ್ ಜಿಲ್ಲಾಧ್ಯಕ್ಷ ವಿರುಪಾಕ್ಷಿ ಆಗ್ರಹಿಸಿದರು.



ನಗರದ ಪತ್ರಿಕಾ ಭವನದಲ್ಲಿ ಮಂಗಳವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಿಳೆಯರ ಮೇಲಿನ ಅನುಕಂಪ ತೋರಿಸುವುದ'ಷ್ಟೇ ಸಾಲದು, ಲಿಂಗ ತಾರತಮ್ಯವಿಲ್ಲದೆ ಸಮಾನ ಹಕ್ಕು ನೀಡಲು ಎಲ್ಲಾ ರಾಜಕೀಯ ಪಕ್ಷಗಳು ಒಗ್ಗೂಡಬೇಕು ಎಂದರು.

77 ವರ್ಷಗಳ ಹಿಂದೆ ನೆಹರು ಪ್ರಧಾನಿಯಾಗಿದ್ದಾಗ ಡಾ. ಬಿ.ಆರ್. ಅಂಬೇಡ್ಕರ್ ಮಹಿಳೆಯರಿಗೆ ಸಮಾನ ಅವಕಾಶ ಕಲ್ಪಿಸುವ ಬಿಲ್ ಮಂಡಿಸಿದ್ದರೂ ವಿವಿಧ ಕಾರಣಗಳಿಂದ ಜಾರಿಯಾಗಲಿಲ್ಲ ಎಂದು ಅವರು ಸ್ಮರಿಸಿದರು.

ಇದೀಗ ದೀರ್ಘ ಅವಧಿಯ ಬಳಿಕ ಮಹಿಳಾ ಮೀಸಲಾತಿ ಬಿಲ್ ಪಾಸ್ ಮಾಡಲು ಮುಂದಾಗಿರುವಾಗ ವಿರೋಧ ಪಕ್ಷಗಳು ಐದು ರಾಜ್ಯಗಳ ಚುನಾವಣೆ, ಕ್ಷೇತ್ರ ಪುನರ್‌ವಿಂಗಡಣೆ ನೆಪವೊಡ್ಡಿ ಅಡ್ಡಿಪಡಿಸುತ್ತಿರುವುದು ಸರಿಯಲ್ಲ ಎಂದು ಟೀಕಿಸಿದರು.

ಎನ್‌ಡಿಎ ಸರ್ಕಾರ ಮಹತ್ವಾಕಾಂಕ್ಷಿ ಯೋಜನೆಗಳ ಮೂಲಕ ಜನಮನ ಗೆಲ್ಲುತ್ತಿರುವುದರಿಂದಲೇ ಕೆಲವು ಪಕ್ಷಗಳು ವಿರೋಧಿಸುತ್ತಿವೆ ಎಂದು ಆರೋಪಿಸಿದ ಅವರು, ಬಿಲ್‌ಅನ್ನು ಮತ್ತೊಮ್ಮೆ ಸದನದಲ್ಲಿ ಮಂಡಿಸಿ ಎಲ್ಲಾ ಪಕ್ಷಗಳು ಪಕ್ಷಾತೀತವಾಗಿ ಬೆಂಬಲಿಸಬೇಕು ಎಂದು ಒತ್ತಾಯಿಸಿದರು.

ಗೋಷ್ಠಿಯಲ್ಲಿ ಮುಖಂಡರಾದ ಮಹಾಂತೇಶ್ ಪಾಟೀಲ್, ಸಣ್ಣ ನರಸಿಂಹ ನಾಯಕ, ಅಮರೇಶ ಪಾಟೀಲ್, ರಮಾದೇವಿ, ತಿಮ್ಮಾರೆಡ್ಡಿ, ನರಸಪ್ಪ ಮತ್ತಿತರರು ಇದ್ದರು.

ಮಹಿಳಾ ಮೀಸಲಾತಿ ಮಸೂದೆ ವಿರೋಧ: ಕಾಂಗ್ರೆಸ್ ವಿರುದ್ಧ ಶಾಸಕಿ ಕರೆಮ್ಮ ಜಿ ನಾಯಕ ಕಿಡಿ



ದೇವದುರ್ಗ, ಏ.22:

ಮಹಿಳಾ ಮೀಸಲಾತಿ ಮಸೂದೆಗೆ ಕಾಂಗ್ರೆಸ್ ಪಕ್ಷ ವಿರೋಧ ವ್ಯಕ್ತಪಡಿಸಿರುವುದನ್ನು ತೀವ್ರವಾಗಿ ಖಂಡಿಸಿರುವ ಶಾಸಕಿ ಕರೆಮ್ಮ ಜಿ ನಾಯಕ, ಇದು ದೇಶದ ಮಹಿಳೆಯರ ಹಕ್ಕುಗಳಿಗೆ ದ್ರೋಹವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮಹಿಳಾ ಸಬಲೀಕರಣದ ಹರಿಕಾರ ಹಾಗೂ ''ಮಣ್ಣಿನ ಮಗ'' ಎಂದೇ ಖ್ಯಾತರಾಗಿರುವ ಮಾಜಿ ಪ್ರಧಾನಮಂತ್ರಿ ಶ್ರೀ ಹೆಚ್.ಡಿ. ದೇವೇಗೌಡರು 1996ರಲ್ಲಿ ಅಧಿಕಾರದಲ್ಲಿದ್ದಾಗ ಸಂಸತ್ತಿನಲ್ಲಿ ಮೊದಲ ಬಾರಿಗೆ 33 ಶೇಕಡಾ ಮಹಿಳಾ ಮೀಸಲಾತಿ ಮಸೂದೆಯನ್ನು ಮಂಡಿಸಿದ್ದನ್ನು ಅವರು ಸ್ಮರಿಸಿದರು. ದೇವೇಗೌಡರು ಬಿತ್ತಿದ ಈ ಕನಸು ಈಗ ಸಾಕಾರಗೊಳ್ಳುವ ಹಂತದಲ್ಲಿದ್ದರೂ, ಕಾಂಗ್ರೆಸ್ ಪಕ್ಷ ಇಂದಿನ ಸಂಸತ್ ಅಧಿವೇಶನದಲ್ಲಿ ಈ ಐತಿಹಾಸಿಕ ಮಸೂದೆಯನ್ನು ವಿರೋಧಿಸುವ ಮೂಲಕ ಮಹಿಳಾ ಸಮುದಾಯದ ವಿರುದ್ಧ ನಡೆದುಕೊಂಡಿದೆ ಎಂದು ಆರೋಪಿಸಿದರು.

ಇಂದು ದೇವದುರ್ಗದಲ್ಲಿ ಕಾಂಗ್ರೆಸ್ ಹಾಗೂ ಇತರ ವಿರೋಧ ಪಕ್ಷಗಳ ನಿಲುವನ್ನು ಖಂಡಿಸಿ ಅಂಬೇಡ್ಕರ್ ವೃತ್ತದಿಂದ ತಹಸೀಲ್ದಾರ್ ಕಚೇರಿ ವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಮಹಿಳೆಯರಿಗೆ ರಾಜಕೀಯ ಶಕ್ತಿ ನೀಡಲು ದೇವೇಗೌಡರು ಹೊಂದಿದ್ದ ಆಶಯಕ್ಕೆ ಕಾಂಗ್ರೆಸ್ ತಣ್ಣೀರು ಎರಚುತ್ತಿದೆ ಎಂದು ಟೀಕಿಸಿದರು.

ದಶಕಗಳ ಕಾಲ ದೇಶವನ್ನು ಆಡಳಿತ ನಡೆಸಿದರೂ ಮಹಿಳಾ ಮೀಸಲಾತಿ

4 ನೇ ಪುಟಕ್ಕೆ...



ರಾಮಲಿಂಗೇಶ್ವರ ಮೈದಾನದಲ್ಲಿ 12 ಕೋಟಿ ವೆಚ್ಚದ ಕಲ್ಯಾಣ ಮಂಟಪಕ್ಕೆ ಭೂಮಿ ಪೂಜೆ

ರಾಯಚೂರು,ಏ.22-

ವೀರಶೈವ ಲಿಂಗಾಯತ ಸಮಾಜದ ವತಿಯಿಂದ ಸುಮಾರು 12 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗಲಿರುವ ಕಲ್ಯಾಣ ಮಂಟಪದ ಭೂಮಿ ಪೂಜೆ ಇಂದು ರಾಮಲಿಂಗೇಶ್ವರ ಮೈದಾನದಲ್ಲಿ ಶ್ರದ್ಧಾಭಕ್ತಿಯಿಂದ ನೆರವೇರಿತು.

ಕ್ಷೇತ್ರದ ಶಾಸಕರು, ಸಮಾಜದ ಸರ್ವ ಸದಸ್ಯರು ಹಾಗೂ ಶ್ರೀಮಠದ ಪೂಜ್ಯ ಸ್ವಾಮೀಜಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡು ವೈದಿಕ ವಿಧಿ ವಿಧಾನಗಳ ಮೂಲಕ ಪೂಜಾ ಕೈಂಕರ್ಯವನ್ನು ಯಶಸ್ವಿಗೊಳಿಸಿದರು.

ಸಮಾಜದ ಮುಖಂಡರು ಮಾತನಾಡಿ, ಸಾಂಸ್ಕೃತಿಕ

4 ನೇ ಪುಟಕ್ಕೆ...

ಭೀಮ್ ಜಯಂತಿ ಸಂಭ್ರಮ: ದಲಿತ ಶಕ್ತಿಪಡೆಯಿಂದ ಬೃಹತ್ ಜಾಥಾ



ರಾಯಚೂರು, ಏ. 22- ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ 135ನೇ ಜಯಂತಿ ಅಂಗವಾಗಿ ದಲಿತ ಶಕ್ತಿಪಡೆ ಸಂಘಟನೆ ವತಿಯಿಂದ ಏಪ್ರಿಲ್ 25 ರಂದು ನಗರದಲ್ಲಿ ಭೀಮ್ ಜಯಂತಿ ಸಂಭ್ರಮವನ್ನು ಅದ್ದೂರಿಯಾಗಿ ಆಚರಿಸಲಾ ಗುತ್ತಿದೆ ಎಂದು ಸಂಘಟನೆಯ ಜಿಲ್ಲಾಧ್ಯಕ್ಷ ಆನಂದ್ ರಾಜ್ ತಿಳಿಸಿದ್ದಾರೆ.

ನಗರದ ಪತ್ರಿಕಾ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಏ. 25 ರಂದು ಸಂಜೆ 5 ಗಂಟೆಗೆ ಸ್ಟೇಷನ್ ಸರ್ಕಲ್ ವೃತ್ತದಿಂದ ಡಾ.ಬಿ.ಆರ್ ಅಂಬೇಡ್ಕರ್ ವೃತ್ತದವರೆಗೆ ಬೃಹತ್ ಕಾಲ್ನಡಿಗೆ ಜಾಥಾ ಹಮ್ಮಿಕೊಳ್ಳಲಾಗಿದೆ. ವಿವಿಧ ಸಂಘಟನೆಗಳ ಪದಾಧಿಕಾರಿಗಳು, ಯುವಕರು ಹಾಗೂ ಅಂಬೇಡ್ಕರ್ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

ಜಾಥಾದ ನಂತರ ಅಂಬೇಡ್ಕರ್ ವೃತ್ತದ ಮುಂಭಾಗದಲ್ಲಿ ವೇದಿಕೆ

4 ನೇ ಪುಟಕ್ಕೆ...

ಗಾಳಿ-ಗುಡುಗು ಸಹಿತ ಮಳೆ ಗಾಳಿ ರಭಸಕ್ಕೆ ಹಾರಿದ ಸೋಲಾರ್ ಪ್ಲೇಟ್

ಸಿರವಾರ. ಏ.22-

ಎರಡು ದಿನಗಳಿಂದ ದಿನ ಬಿಟ್ಟು ದಿನ ಗಾಳಿ ಗುಡುಗು ಸಹಿತ ಅಲ್ಪ ಮಳೆಯಾದರೆ, ಗಾಳಿಗೆ ಟಿನ್ ಶೇಡ್, ರೈತರ ಜಮೀನುಗಳಲ್ಲಿ ಅಳವಡಿಸಿರುವ ಸೋಲಾರ್ ಪ್ಲೇಟ್ ಗಳು ಹಾರಿ ಹೋಗಿ ರೈತರಿಗೆ ಭಾರಿ ನಷ್ಟವಾಗಿದೆ. ತಾಲೂಕಿನಲ್ಲಿ ವ್ಯಾಪ್ತಿಯಲ್ಲಿ



ಭಾನುವಾರ ಮತ್ತು ಮಂಗಳವಾರ ಸಂಜೆ ಬಿರುಗಾಳಿ ಬಿಸಿದೆ, ಇದರ ಜೊತೆಗೆ ಗುಡುಗು, ಮಿಂಚು ಬಿದ್ದಿದೆ. ಕಡಿಮೆ ಮಳೆ ಸುರಿದರೆ. ಗಾಳಿಗೆ ಅಲಲ್ಲಿ ಮರಗಳ ಕೊಂಬೆಗಳು ವಿದ್ಯುತ್ ವೈರಿನ ಮೇಲೆ ಬಿದ್ದ ಪರಿಣಾಮ ಎರಡು ದಿನಗಳಿಂದ ವಿದ್ಯುತ್ ಸರಬರಾಜಿನಲ್ಲಿ ತೊಂದರೆಯಾಗಿತು. ಸಿರವಾರ ವಿಎಸ್ ಎಸ್ ಎನ್ ಮುಂದೆ ದೊಡ್ಡ ಮರ ಅಂಗಡಿ ಮೇಲೆ ಬಿದ್ದ ಪರಿಣಾಮ ಟಿನ್ ಶೇಡ್ ಮುರಿದಿದೆ. ಹಳ್ಳಿ ಹೊಸೂರು ಗ್ರಾಮದ ಶಿವಪ್ಪ ಅವರ ಜಮೀನನಲ್ಲಿ ಸುಮಾರು 6 ಲಕ್ಷ ಮೌಲ್ಯದ ಸೋಲಾರ್ ಪ್ಲೇಟ್ ಗಳು ಹಾರಿ ಹೋಗಿ, ಹಾಳಾಗಿವೆ ಅದ'ರ' ಜೊತೆಗೆ ಇನ್ನಿತರ ಸಾಮಗ್ರಿಗಳು ಸ'ಹ' ಹಾಳಾದ ಪರಿಣಾಮ ಸುಮಾರ 4 ಲಕ್ಷದ ವರೆಗೂ ಲಾಸ್ ಆಹಿದೆ. ಬೆಸಿಗೆ ಬೆಳಗೆ ನಾಟಿ ಮಾಡಿದ ಭತ್ತವು ಕಟ್ಟಾವು ಹಂತಕ್ಕೆ ಬಂದಿದ್ದೂ ನೆಲ್ಲಕೆ ಉರುಳಿದೆ. ಗುಡುಗು ಮಿಂಚು, ಗಾಳಿಗೆ, ಯಾವುದೇ ಪ್ರಾಣ ಹಾನಿಯಾಗಿಲ. ಅಲ್ಪ ಮಳೆಗೆ ವಾತಾವರಣದಲ್ಲಿ ಸ್ವಲ್ಪ ಬಿಸಿ ಕಡಿಮೆಯಾಗಿ ತಂಪಾಗಿವೆS

ನಗರದಲ್ಲಿ ಇತಿಹಾಸ ಸೃಷ್ಟಿಸಿದ ಬಸವ ಜಯಂತಿ ಮೆರವಣಿಗೆ

ರಾಯಚೂರು,ಏ.21

ನಗರದ ಬೃಸ್ಪತಿವಾರಪೇಟೆಯ ಶ್ರೀ ವೀರಭದ್ರೇಶ್ವರ ದೇವಸ್ಥಾನದಿಂದ ಶ್ರೀ ವೀರಶೈವ ಮಹಾಂತೇಶ ಕಲ್ಯಾಣ ಮಂಟಪದವರೆಗೆ ಬಸವ ಜಯಂತಿಯ ನಿಮಿತ್ಯ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ಜಿಲ್ಲಾ ವೀರಶೈವ ಲಿಂಗಾಯತ ಸಮಾಜ, ಬಸವ ಕೇಂದ್ರ, ಜಾಗತಿಕ ವೀರಶೈವ ಲಿಂಗಾಯತ ಸಮಾಜ, ವೀರಶೈವ ರುಧ್ರಸೇನಾ ಸಮಿತಿ ಹಾಗೂ ಇನ್ನುಳಿದ ಅಂಗಸ್ಥೆಗಳ ಸಹಭಾಗಿತ್ವದಲ್ಲಿ ಜಗಜ್ಯೋತಿ ಬಸವೇಶ್ವರರ ಭಾವಚಿತ್ರ ಮೆರವಣಿಗೆಯನ್ನು ಬಸವ ಜಯಂತಿಯ ಮರುದಿನವಾದ ದಿ. 21 ಮಂಗಳವಾರದಂದು ಸಂಜೆ 06 ಗಂಟೆಯಿಂದ ಹಮ್ಮಿಕೊಳ್ಳಲಾಗಿತ್ತು.



ಮೆರವಣಿಗೆಯ ದಿವ್ಯ ಸಾನಿಧ್ಯವನ್ನು ಕಿಲ್ಲೇಬೃಹನ್ಮಠದ ಪೂಜ್ಯಶ್ರೀ ಶಾಂತಮಲ್ಲ ಶಿವಾಚಾರ್ಯ ಸ್ವಾಮಿಗಳು, ಸೋಮವಾರಪೇಟೆ ಹಿರೇಮಠದ ಪೂಜ್ಯಶ್ರೀ ಅಭಿನವ ರಾಚೋಟಿ ವೀರ ಶಿವಾಚಾರ್ಯ ಮಹಾಸ್ವಾಮಿಗಳು ಹಾಗೂ ಮಂಗಳವಾರಪೇಟೆ ಹಿರೇಮಠದ ಪೂಜ್ಯಶ್ರೀ ವೀರ ಸಂಗಮೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ವಹಿಸಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ವೀರಶೈವ ಲಿಂಗಾಯತ ಸಮಾಜದ ಜಿಲ್ಲಾಧ್ಯಕ್ಷರಾದ ಶರಣಭೂಪಾಲ ನಾಡಗೌಡರು ವಹಿಸಿದ್ದರು, ಮುಖ್ಯ ಅತಿಥಿಗಳಾಗಿ ನಗರ ಶಾಸಕ ಡಾ. ಎಸ್.ಶಿವರಾಜ ಪಾಟೀಲ, ಗ್ರಾಮಾಂತರ ಶಾಸಕರಾದ ಬಸನಗೌಡ ದದ್ದಲ್ ಹಾಗೂ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷರಾದ ಚಂದ್ರಶೇಖರ ಪಾಟೀಲ ಮಿರ್ಜಾಪೂರವರು ಆಗಮಿಸಿದ್ದರು.

ಉಭಯ ಶಾಸಕರು ಶ್ರೀ ವೀರಭದ್ರೇಶ್ವರ ದೇವರ ದರ್ಶನಾಶೀರ್ವಾದ ಪಡೆದು ಜಗಜ್ಯೋತಿ ಬಸವೇಶ್ವರರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಂಗಳಾರುತಿ ಬೆಳಗುವುದರ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು.

ಮೆರವಣಿಗೆಯಲ್ಲಿ ನೂರಾರು ಮಹಿಳೆಯರು ಒಂದೇ ಬಣ್ಣದ ಸಾರಿಯನ್ನು ಧರಿಸಿ ಬಸವೇಶ್ವರರ ಮೆರವಣಿಗೆಯಲ್ಲಿ ಇತಿಹಾಸ ಸೃಷ್ಠಿಸಿದರು.

ವೀರಭದ್ರೇಶ್ವರ ದೇವಸ್ಥಾನದಿಂದ ಪ್ರಾರಂಭವಾದ ಮೆರವಣಿಗೆಯಲ್ಲಿ ಪುರವಂತಿಕೆ ಸೇವೆ, ವಡಪುಗಳ ಸೇವೆ, ಕಾಶೀ ಧರಿಸುವವರ ಸೇವೆ, ಡೊಳ್ಳು, ಬಾಜಾ ಭಜಂತ್ರಿ ಕಲವಿದರಿಂದ ಅತೀ ಸಂಭ್ರಮ ಸಡಗರದ ವಿಜೃಂಭಣೆಯಿಂದ ಸರದಾರ ವಲ್ಲಭಬಾಯ್ ಪಟೇಲ್ ವೃತ್ತ, ಪಟೇಲ್

4 ನೇ ಪುಟಕ್ಕೆ...

ಜಗದ್ಗುರು ಶಂಕರಾಚಾರ್ಯರ ಜಯಂತಿ ಆಚರಣೆ

ಸಿಂಧನೂರು,ಏ.22-

ತಾಲೂಕ ಆಡಳಿತದ ವತಿಯಿಂದ ಸಿಂಧನೂರು ತಹಸೀಲ್ದಾರ್ ಕಾರ್ಯಾಲಯದಲ್ಲಿ. ಮಂಗಳವಾರ ಜಗದ್ಗುರು ಶಂಕರಾಚಾರ್ಯರ ಭಾವಚಿತ್ರಕ್ಕೆ ಪೂಜೆ ಹಾಗೂ ಪುಷ್ಪ ನಮನ ಸಲ್ಲಿಸಿ ಜಯಂತಿಯನ್ನು ಆಚರಿಸಲಾಯಿತು. ಈ ವೇಳೆ ಶಾಸಕ ಹಂಪನಗೌಡ ಬಾದರ್ಲಿ ಮಾತನಾಡಿ ಶಂಕರಾಚಾರ್ಯರ ತತ್ವ ಸಿದ್ಧಾಂತಗಳು. ಇಂದಿಗೂ ಪ್ರಚಲಿತವಾಗಿವೆ ಸಮಾಜದಲ್ಲಿ ಅಧರ್ಮ ತಾಂಡವಾಡುತ್ತಿದ್ದ ಸಂದರ್ಭದಲ್ಲಿ ಜನ್ಮ ತಾಳಿದ ಶಂಕರಾಚಾರ್ಯರು ಸನಾತನ ಧರ್ಮದ ಉಳಿವಿಗಾಗಿ ದೇಶ ಸಂಚಾರ ಮಾಡಿ ಅದ್ವೈತ ತತ್ವವನ್ನು ಸಾರಿದ ಮಹಾನುಭಾವರು. ಅವರು ಕೇವಲ ಎಂಟು ವರ್ಷ ವಯಸ್ಸಿದ್ದಾಗಲೇ ನಾಲ್ಕು ವೇದಗಳನ್ನು ಅಧ್ಯಯನ ಮಾಡಿ ಅದ್ವೈತ ಭಾವನೆ ಜ್ಞಾನಮಾರ್ಗ ಮಾಯಾ ತತ್ವದ ಅರಿವು ಶಿಸ್ತು ಮತ್ತು ಭಕ್ತಿ ತ್ಯಾಗ ಮತ್ತು ವೈರಾಗ್ಯ ಇವು ಶಂಕರಾಚಾರ್ಯರ ಪ್ರಮುಖ ತತ್ವಗಳಾಗಿವೆ ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಮಾನಸಿಕ ಶಾಂತಿ ಸಮಾನತೆ ಮತ್ತು ಆಧ್ಯಾತ್ಮಿಕ ಉನ್ನತಿ ಸಾಧ್ಯವಾಗುತ್ತದೆ ಎಂದು ಶಾಸಕರು ಹೇಳಿದರು.



ಕೆ ಒ ಎಫ್ ರಾಜ್ಯ ಅಧ್ಯಕ್ಷರು ಹಾಗೂ ಮಾಜಿ ಸಚಿವರಾದ ವೆಂಕಟರಾವ್ ನಾಡಗೌಡ ಅವರು ಮಾತನಾಡಿ. ಶಂಕರಾಚಾರ್ಯರು ಆತ್ಮಜ್ಞಾನ ಎನ್ನುವುದು ಬ್ರಹ್ಮ ಜ್ಞಾನವಾಗಿ ಪ್ರತಿಯೊಬ್ಬರಲ್ಲೂ ಇರುವಂತದ್ದು. ಎಂದು ತೋರಿಸಿಕೊಟ್ಟವರು ಭಾರತೀಯ ಧಾರ್ಮಿಕ ಪಂತದೊಳಗೆ ವಿಶೇಷವಾಗಿ ಗುರುತಿಸಲ್ಪಡುತ್ತಾರೆ. ಮನುಷ್ಯ ಜಾತಿಯಲ್ಲಿ ಹುಟ್ಟಿದ ಪ್ರತಿಯೊಬ್ಬರು ಬ್ರಹ್ಮ ಜ್ಞಾನ ಹೊಂದಲು ಸಾಧ್ಯ ಎಂದು ಸಂದೇಶ ಸಾರಿದವರು ಶಂಕರಾಚಾರ್ಯರು ಶಂಕರಾಚಾರ್ಯರು ಅತಿ ಕಡಿಮೆ ವಯಸ್ಸಿನಲ್ಲಿ ದೇಶದಾದ್ಯಂತ ಸಂಚರಿಸಿ ಧಾರ್ಮಿಕ ತತ್ವಗಳನ್ನು ಬೋಧಿಸಿ ಭಾರತದ ನಾಲ್ಕು ದಿಕ್ಕುಗಳಲ್ಲಿ ಪೀಠಗಳನ್ನು ಸ್ಥಾಪಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಕರ್ನಾಟಕದ ಶೃಂಗೇರಿಯಲ್ಲಿ ಮಠ ಸ್ಥಾಪನೆ ಮೂಲಕ ಧರ್ಮದ

4 ನೇ ಪುಟಕ್ಕೆ...

ದೂರುಗಳ ಹಿನ್ನೆಲೆ ಜಿಲ್ಲಾಧಿಕಾರಿಗಳಿಂದ ತುರ್ತು ಸಭೆ; ಶಿಸ್ತಿನ ಪಾಠ

ಅಶಿಸ್ತು ಮುಂದುವರೆಸಿದರೆ ಅಧಿಕಾರಿಗಳು, ಸಿಬ್ಬಂದಿ ಮೇಲೆ ಕ್ರಮ: ಜಿಲ್ಲಾಧಿಕಾರಿ ಡಾ.ಸುರೇಶ ಬಿ.ಇಟ್ನಾಳ ಎಚ್ಚರಿಕೆ

ಕೊಪ್ಪಳ,ಏ.22-

ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಇಲಾಖೆಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ಶಿಸ್ತಿನಿಂದ ಹಾಗೂ ಸಮಯ ಪ್ರಜ್ಞೆಯೊಂದಿಗೆ ಕಾರ್ಯನಿರ್ವಹಿಸಬೇಕು. ಅಶಿಸ್ತು ಮುಂದುವರೆಸಿದರೆ ಶಿಸ್ತು ಕ್ರಮ ಜರುಗಿಸುವುದಾಗಿ ಜಿಲ್ಲಾಧಿಕಾರಿಗಳಾದ ಡಾ. ಸುರೇಶ ಬಿ. ಇಟ್ನಾಳ ಅವರು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಏಪ್ರಿಲ್ 21ರಂದು ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ತುರ್ತು ಸಭೆ ನಡೆಸಿ ಅವರು ಮಾತನಾಡಿದರು.

ಅಧಿಕಾರಿಗಳು ಸಮಯಕ್ಕೆ ಸರಿಯಾಗಿ ಕಚೇರಿಗೆ ಬರಬೇಕು ಎಂದು ಹೇಳುವ ಪರಿಸ್ಥಿತಿ ಬರಬಾರದು ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಜಿಲ್ಲಾಧಿಕಾರಿಗಳು, ನೀವೆಲ್ಲಾ ಜಿಲ್ಲಾಮಟ್ಟದ ಅಧಿಕಾರಿಗಳು, ನಿಮಗೆ ಸಮಯ ಪ್ರಜ್ಞೆ ಇರಬೇಕು. ನೀವೇ ಕಚೇರಿಗೆ ಲೇಟಾಗಿ ಬಂದು ಸಿಬ್ಬಂದಿಗೆ ಇನ್ನೇನು ಪಾಠ ಹೇಳುತ್ತೀರಿ. ನಾನು ಜವಾಬ್ದಾರಿಯುತ ಸ್ಥಾನದಲ್ಲಿರುವ ಅಧಿಕಾರಿ ಎಂಬುದಾಗಿ ನಿಮಗೆ ನೀವೇ ಅರಿತು ಕಚೇರಿಗೆ ಸರಿಯಾದ ಸಮಯಕ್ಕೆ ಹಾಜರಾಗಿ ಕಚೇರಿಯ ಇನ್ನಿತರ ಸಿಬ್ಬಂದಿಗೆ ಉತ್ತಮ ಪರಿಪಾಠ ಹಾಕಬೇಕು ಎಂದು ಜಿಲ್ಲಾಧಿಕಾರಿಗಳು ಸಲಹೆ ಮಾಡಿದರು.

ನೀವು ಯಾವ ಸಮಯಕ್ಕೆ ಕಚೇರಿಗೆ ಬಂದಿದ್ದೀರಿ? ನೀವು ಬಂದಾಗ ನಿಮ್ಮ ಸಿಬ್ಬಂದಿ ಕಚೇರಿಯಲ್ಲಿದ್ರಾ? ಎಂದು ಇಲಾಖಾವಾರು ಅಧಿಕಾರಿಗಳ ಹಾಜರಾತಿಯ ಬಗ್ಗೆ ಜಿಲ್ಲಾಧಿಕಾರಿಗಳು ಇದೆ ವೇಳೆ ಪರಿಶೀಲಿಸಿ, ಅಧಿಕಾರಿಗಳಿಗೆ ಅರ್ಧಗಂಟೆಗೂ ಹೆಚ್ಚು ಕಾಲ ಶಿಸ್ತಿನ ಪಾಠ ಮಾಡಿದರು.

ಬಿಸಿಲಿನ ಪ್ರಖರತೆ ಮತ್ತು ತೀವ್ರತೆ ಕಾರಣದಿಂದಾಗಿ ಕಲ್ಯಾಣ ಕರ್ನಾಟಕ ಒಳಗೊಂಡತೆ ಉತ್ತರ ಕರ್ನಾಟಕ ಭಾಗದ ವಿವಿಧ ಜಿಲ್ಲೆಗಳಲ್ಲಿ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಕಚೇರಿ ಕೆಲಸದ ಸಮಯವನ್ನು ಬೆಳಿಗ್ಗೆ 8 ರಿಂದ ಮಧ್ಯಹ್ನ 1.30 ರವರೆಗೆ ಬದಲಾವಣೆ ಮಾಡಿ ಸರ್ಕಾರವು ಆದೇಶಿಸಿದೆ. ಜಿಲ್ಲೆಯ ಕೆಲ ಇಲಾಖೆಗಳಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿ ನಿಗದಿತ ಸಮಯಕ್ಕೆ ಕಚೇರಿಗೆ ಹಾಜರಾಗುತ್ತಿಲ್ಲ; ಕಚೇರಿಯಲ್ಲಿ ಕಾಣುವುದಿಲ್ಲ ಎಂದು ಕೆಲವು ಪತ್ರಿಕೆಗಳಲ್ಲಿ ವರದಿಯಾಗಿದ್ದನ್ನು ಜಿಲ್ಲಾಡಳಿತವು ಗಂಭೀರವಾಗಿ ಪರಿಗಣಿಸಿದೆ. ಅದಕ್ಕಾಗಿಯೇ ಏಪ್ರೀಲ್ 21ರಂದು ಖುದ್ದು ಕೆಲ ಕಚೇರಿಗಳಿಗೆ ಆಕಸ್ಮಿಕ ಭೇಟಿ ನೀಡಿ ಪರಿಶೀಲನೆ ಮಾಡಿಸಿದ್ದೇವೆ. 10 ಗಂಟೆಯಾದರು ಕೆಲ ಅಧಿಕಾರಿಗಳು



ಕಾಣಿಸಿರುವುದಿಲ್ಲ. ಸಿಬ್ಬಂದಿಯು ಇರಲಿಲ್ಲ. ಇದು ನಾಚಿಕೆಗೇಡಿನ ಸಂಗತಿ. ನಿಮಗೆ ಅರಿವಿಲ್ಲವೇ? ಎಂದು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಕಾರಣ ಕೇಳಿ ನೋಟೀಸ್: ಅಧಿಕಾರಿಗಳ ತಂಡ ರಚಿಸಿ ಇನ್ಮುಂದೆ ವಾರಕ್ಕೊಮ್ಮೆ ಆಯಾ ಕಚೇರಿಗಳಿಗೆ ಆಕಸ್ಮಿಕ ಭೇಟಿ ಮಾಡಲಾಗುತ್ತದೆ. ಆ ವೇಳೆಯಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿ ಕಚೇರಿಯಲ್ಲಿ ಕಾಣಸದಿದ್ದರೆ ಆಯಾ ಅಧಿಕಾರಿಗಳು ಮತ್ತು ಸಿಬ್ಬಂದಿಯ ಮೇಲೆ ಶಿಸ್ತುಕ್ರಮಕ್ಕಾಗಿ ಮೇಲಧಿಕಾರಿಗಳಿಗೆ ವರದಿ ಮಾಡುವುದಾಗಿ ಜಿಲ್ಲಾಧಿಕಾರಿಗಳು ಎಚ್ಚರಿಕೆ ನೀಡಿದರು. ಕಚೇರಿಗೆ ವಿಳಂಬವಾಗಿ ಆಗಮಿಸುವುದನ್ನು ಮುಂದುವರೆಸಿದರೆ ಅಂತಹ ಅಧಿಕಾರಿಗಳಿಗೆ ಇನ್ಮುಂದೆ ಕಾರಣ ಕೇಳಿ ನೋಟೀಸ್ ಜಾರಿ ಮಾಡಲಾಗುವುದು ಎಂದು ತಿಳಿಸಿದರು. ಚಲನವಲನ ವಹಿ ಪಾಲನೆಗೆ ಸೂಚನೆ: ಕಚೇರಿಯಲ್ಲಿ ಚಲನವಲನ ವಹಿ ಇದ್ದಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿ ಎಲ್ಲಿದ್ದಾರೆ ಎಂಬುದು ತಿಳಿಯುತ್ತದೆ. ಹಾಗಾಗಿ ಇನ್ನುಂದೆ ಎಲ್ಲಾ ಇಲಾಖೆಗಳಲ್ಲಿ ಕಡ್ಡಾಯವಾಗಿ ಚಲನವಲನ ವಹಿಯನ್ನು ನಿರ್ವಹಣೆ ಮಾಡಬೇಕು ಎಂದು ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ವೈದ್ಯರ ಮೇಲೆ ಸಾಕಷ್ಟು ದೂರು: ವೈದ್ಯಾಧಿಕಾರಿಗಳು ಮತ್ತು ವೈದ್ಯರ ಮೇಲೆ ಸಾಕಷ್ಟು ದೂರುಗಳು ಬರುತ್ತಿವೆ. ಇದು ಇಲ್ಲಿಗೆ ನಿಲ್ಲಬೇಕು. ಬರೀ ದೂರುಗಳನ್ನು ಕೇಳತ್ತ ಕೂಡುವುದೇ ನಮ್ಮ ಕೆಲಸವಲ್ಲ. ಯಾವುದೇ ದೂರುಗಳನ್ನು ಹಗುರವಾಗಿ ಪರಿಗಣಿಸದೇ ಜವಾಬ್ದಾರಿಯುತವಾಗಿ ಕಾರ್ಯ ನಿರ್ವಹಿಸಬೇಕು. ಈ ಬಗ್ಗೆ ಸರಿಯಾಗಿ ಮೇಲ್ವಿಚಾರಣೆ ಮಾಡಬೇಕು ಎಂದು ಜಿಲ್ಲಾಧಿಕಾರಿಗಳು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಏಪ್ರಿಲ್ 21ರಂದು ಬೆಳಗಿನ ಅವಧಿಯಲ್ಲಿ ಕೆಲ ಕಚೇರಿಗಳಿಗೆ ಭೇಟಿ ನೀಡಿದಾಗ ಕಚೇರಿ ಮುಂದಿನ ಕಾರಿಡಾರದಲ್ಲಿ ಅಶುಚಿತ್ವ ಕಾಣಿಸಿತು. ಎಲ್ಲೆಂದರಲ್ಲಿ ಪೋಸ್ಟರ್ ಅಂಟಿಸಿದ್ದು ಕಾಣಿಸಿತು. ಯಾವುದೇ ಪತ್ರವನ್ನು ಅಚ್ಚುಕಟ್ಟಾಗಿ ಸೂಚನಾ ಫಲಕದಲ್ಲಿ ಹಾಕಲು ತಿಳಿಸಿದ್ದರೂ ಎಲ್ಲೆಂದರಲ್ಲಿ ಹಾಕಿರುವುದು ಗಮನಕ್ಕೆ ಬಂದಿತು. ಈ ಅಶಿಸ್ತು ದೂರಾಗಬೇಕು. ಕಚೇರಿಯಲ್ಲಿ ಶಿಸ್ತು ಕಾಯ್ದುಕೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ಸೂಚನೆ ನೀಡಿದರು. ಇನ್ಮುಂದೆ ಪ್ರತಿ ತಿಂಗಳು ಕಚೇರಿಯಲ್ಲಿ ಶುಚಿತ್ವ ಅಭಿಯಾನ ಹಮ್ಮಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಸಭೆಯಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಾದ ಹೇಮಂತಕುಮಾರ, ಅಪರ ಜಿಲ್ಲಾಧಿಕಾರಿಗಳಾದ ಸಿದ್ರಾಮೇಶ್ವರ, ಸಹಾಯಕ ಆಯುಕ್ತರಾದ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಡಿ.ಮಂಜುನಾಥ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿದೇಶಕರಾದ ಮಂಜುನಾಥ ಗುಂಡೂರು, ಜಂಟಿ ಕೃಷಿ ನಿರ್ದೇಶಕರಾದ ಜಿ.ಡಿ.ಕೃಷ್ಣಮೂರ್ತಿ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರಾದ ಅಜ್ಜಪ್ಪ ಸೋಗಲದ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಾದ ಡಾ. ಟಿ.ಲಿಂಗರಾಜು, ಪಶು ಇಲಾಖೆ ಉಪನಿರ್ದೇಶಕರಾದ ಡಾ. ಪಿ.ಎಂ.ಮಲ್ಲಯ್ಯ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಜಗದೀಶ್ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಜಾತ್ಯತೀತ ಭಾರತದ ಪರಿಕಲ್ಪನೆ ಮೂಡಿಸಿದ್ದೇ ಕಲ್ಯಾಣ: ವಿದ್ವಾಂಸ ವಿ ಎಸ್ ಮಾಳಿ

ಕೊಪ್ಪಳ,ಏ.22-

ಜಾತ್ಯತೀತ ಭಾರತದ ಪರಿಕಲ್ಪನೆ ಮೂಡಿಸಿದ್ದೇ ಕಲ್ಯಾಣ ಎಂದು ವಿದ್ವಾಂಸ ವಿ ಎಸ್ ಮಾಳಿ ಅವರು ತಿಳಿಸಿದರು.



ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಕನ್ನಡ ಮತ್ತು ಸಾಂಸ್ಕೃತಿಕ ಇಲಾಖೆ ಹಾಗೂ ನಗರಸಭೆ, ಬಸವ ಜಯಂತ್ಯುತ್ಸವ ಸಮಿತಿ ಕೊಪ್ಪಳ ಮತ್ತು ಬಸವಾನುಯಾಯಿ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಏಪ್ರಿಲ್ 20 ರಂದು ಶ್ರೀ ಗವಿಸಿದ್ದೇಶ್ವರ ಮಠದ ಬಯಲ ಆವರಣದಲ್ಲಿ ನಡೆದ ಕರ್ನಾಟಕದ ಸಾಂಸ್ಕೃತಿಕ ನಾಯಕ ಶ್ರೀ ಬಸವೇಶ್ವರ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಅವರು ಬಸವಗೋಷ್ಠಿ ನಡೆಸಿಕೊಟ್ಟರು. ಕಲ್ಯಾಣದಲ್ಲಿ ಉದಯಿಸಿದ ಬೆಳಕು ಇಂದು ಜಗತ್ತನ್ನೇ ಬೆಳಗುತ್ತಿದೆ. ಕಲ್ಯಾಣದ ಬೆಳಕು ಕನ್ನಡದ ಬೆಳಕು. ಕನ್ನಡದ ಸಾಹಿತ್ಯ ಅಕ್ಷಯ ಸಾಹಿತ್ಯ. ಬಸವಣ್ಣ ಕನ್ನಡದ ಅಸ್ಮಿತೆ, ವಚನ ಸಾಹಿತ್ಯ ಕನ್ನಡದ ಅನನ್ಯತೆ ಎಂದರು. ಕಲ್ಯಾಣ ಅಂದರೆ ಅದು ಕೇವಲ ಸ್ಥಳ ಅಲ್ಲ; ಪ್ರಭುತ್ವವನ್ನು ಪ್ರಶ್ನಿಸುವ ಎಲ್ಲ ಕಾರ್ಯವೂ ಅದು ಕಲ್ಯಾಣ; ಕಲ್ಯಾಣ ಕಾರ್ಯ ಎಂದು ತಿಳಿಯಬೇಕು ಎಂದರು. ಕೂಡಲ ಸಂಗಮನ ಗೋತ್ರ ಎಂದರೆ ಅದು ಮಾದರ ಚನ್ನಯ್ಯನ ಗೋತ್ರವೆಂದು ತಿಳಿಯಲು ಬಸವಣ್ಣ ಹೇಳುತ್ತಾರೆ. ಇಂತಹ ವೃತ್ತಿ ಘನತೆ, ಸಮಾನತೆಯು 12ನೇ ಶತಮಾನದಲ್ಲಿ ಕಲ್ಯಾಣದಲ್ಲಿತ್ತು. ಅಂಬಿಗರ ಚೌಡಯ್ಯ, ಡೋಹರ ಕಕ್ಕಯ್ಯ ಎಂದು ಆಗಿನ ಶರಣರು ತಮ್ಮ ತಮ್ಮ ವೃತ್ತಿ ಮೂಲಕ ಗುರುತಿಸಿಕೊಳ್ಳುವ ಹಾಗೆ ವೃತ್ತಿಗೆ ಘನತೆಯನ್ನು ತಂದುಕೊಟ್ಟವರು ಬಸವಣ್ಣ ಎಂದರು. ಅರಮನೆಗೆ ಪರ್ಯಾಯವಾಗಿ ಬಸವಣ್ಣನವರು ಮಹಾಮನೆ ಕಟ್ಟಿದರು. ಜಗತ್ತಿನ ಎಲ್ಲ ಮನೆಗಳು ಮಹಾಮನೆಗಳಾಗಬೇಕು ಎಂಬುದು ಬಸವಣ್ಣನವರ ಅಪೇಕ್ಷೆಯಾಗಿತ್ತು. ಅನುಭವ ಮಂಟಪ ಎಲ್ಲಿತ್ತು ಎಂದು ಹುಡುಕುವುದಲ್ಲ; ಅದು ಸ್ಥಾವರವಲ್ಲ; ಜಂಗಮದ ಪರಿಕಲ್ಪನೆ. ಸಿಂಹಾಸನ ಅಂದರೆ ಕಾಡಿನ ನ್ಯಾಯ. ಶೂನ್ಯಪೀಠವೆಂದರೆ ಅದು ನಾಡಿನ ನ್ಯಾಯ; ಸಾಮಾಜಿಕ ನ್ಯಾಯ ಎಂದು ಅರಿಯಬೇಕು. ವಿಪರ್ಯಾಸ ಎಂದರೆ ನಾವು ಬಸವಣ್ಣನವರು ಹೇಳಿದ್ದನ್ನು ಸರಿಯಾಗಿ ಪರಿಪಾಲನೆ ಮಾಡುತ್ತಿಲ್ಲ ಎಂದರು.

ಕಟ್ಟಿದ್ದು ಒಂದು ದಿನ ಬೀಳೋದೆ. ಹುಟ್ಟಿದ್ದು ಒಂದು ದಿನ ಸಾಯೋದೆ. ಬೀಳಲಿ, ಸಾಯಲಿ ಆದರೆ ಬಿದ್ದಿರೋದನ್ನು ಕಟ್ಟಬೇಕು ಎಂಬುದೇ ಕಲ್ಯಾಣದ ಸಂದೇಶವಾಗಿದೆ. ನಾವೆಲ್ಲರೂ ಮತ್ತೆ ಮತ್ತೆ ಕಲ್ಯಾಣ ಕಟ್ಟೋಣ ಎಂದು ಚಿಂತಕರಾದ ಮಾಳಿ ಅವರು ತಿಳಿಸಿದರು. ಕೊಪ್ಪಳದ ಸಪ್ಪಳ ಅಂದರೆ ಅದು ಕನ್ನಡದ ಸಪ್ಪಳ. ಕೊಪ್ಪಳ ನೆಲದ ಬಗ್ಗೆ ಕವಿ ರನ್ನ ಹಾಡಿದ್ದಾನೆ. ಹಲವು ಧರ್ಮಗಳ ಬೀಡು ಕೊಪ್ಪಳ ಎಂದು ಅವರು ತಿಳಿಸಿದರು.



ಗ್ರಂಥಾಲಯದಲ್ಲಿ ಬಸವ ಜಯಂತಿ ಆಚರಣೆ

ಕೊಪ್ಪಳ ಏ.22-

ನಗರದ ಗಣೇಶ ನಗರದ ಮುಖ್ಯ ಶಾಖೆಯಲ್ಲಿ ಹಾಗೂ ಎನ್.ಜಿ.ಓ ಕಾಲೋನಿಯ ಮುಖ್ಯ ಗ್ರಂಥಾಲಯಾಧಿಕಾರಿ ಕಛೇರಿಯಲ್ಲಿ ಸೋಮವಾರ ಬಸವ ಜಯಂತಿ ಆಚರಿಸಲಾಯಿತು.

ಗಣೇಶ ನಗರದ ಶಾಖೆಯಲ್ಲಿ ಓದುಗರೊಂದಿಗೆ ಆಚರಿಸಿದರೆ, ಜಿಲ್ಲಾ ಕೇಂದ್ರ ಗ್ರಂಥಾಲಯದ ಕಛೇರಿಯಲ್ಲಿ ಮುಖ್ಯ ಗ್ರಂಥಾಲಯಾಧಿಕಾರಿ ಯಮುನೂರಪ್ಪ ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

ಪುಷ್ಪ ನಮನ ಸಲ್ಲಿಸಿದ ಬಳಿಕ ಮಾತನಾಡಿ ಬಸವಣ್ಣ ಕರ್ನಾಟಕ ಅಷ್ಟೇ ಅಲ್ಲ ಇಡೀ ಮನುಕುಲಕ್ಕೆ ಸಕಾರಾತ್ಮಕ ಹಾದಿಯಲ್ಲಿ ಬದುಕಲು ನೆರವಾಗುವಂತ ವಚನಗಳನ್ನು ಕೊಟ್ಟಿದ್ದಾರೆ. ಎಲ್ಲರೂ ವಚನಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಬದುಕುವುದೆ ನಾವು ಮಹನೀಯರಿಗೆ ಸಲ್ಲಿಸುವ ಗೌರವ ಎಂದರು.

ಕಾರ್ಯಕ್ರಮದಲ್ಲಿ ಸಿಬ್ಬಂದಿಗಳಾದ ವಿಜಯಲಕ್ಷ್ಮೀ ವಡ್ಡಟ್ಟಿ, ವಿರೇಶ ಮಜ್ಗಿ, ಉಮಾ ಹಳ್ಯಾಳ, ಇದ್ದರು ನಾಗರಾಜನಾಯಕ ಡಿ.ಡೊಳ್ಳಿನ ನಿರೂಪಿಸಿದರು ಬಿ.ಕೊಟ್ರಪ್ಪ ವಂದಿಸಿದರು.

ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆ

ಕುಡಿಯುವ ನೀರು ಪೂರೈಕೆ ಸಮರ್ಪಕವಾಗಿರಲಿ-ಡಿಸಿ ನಾಗೇಂದ್ರ ಪ್ರಸಾದ್.ಕೆ

ಬಳ್ಳಾರಿ,ಏ.22-

ಜಿಲ್ಲೆಯಲ್ಲಿ ಕುಡಿಯುವ ನೀರಿನ ಪೂರೈಕೆ ಸಮರ್ಪಕವಾಗಿರುವಂತೆ ಅಧಿಕಾರಿಗಳು ನೋಡಿಕೊಳ್ಳಬೇಕು ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷರೂ ಆದ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಕಟ್ಟುನಿಟ್ಟಿನ ಸೂಚನೆ ನೀಡಿದರು.

ನಗರದ ನೂತನ ಜಿಲ್ಲಾಡಳಿತ ಭವನದ ಕೆಸ್ವಾನ್ ವಿಡಿಯೋ ಸಭಾಂಗಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ತುಂಗಭದ್ರಾ ನದಿ ಹಾಗೂ ಕಾಲುವೆ ತೀರದಲ್ಲಿಯೇ ಇದ್ದರೂ, ಕಂಪ್ಲಿ ಭಾಗದ ಸಣಾಪುರ ಸೇರಿದಂತೆ ಕೆಲ ಗ್ರಾಮಗಳಲ್ಲಿ ಕುಡಿಯುವ ನೀರು ಸರಿಯಾಗಿ ಪೂರೈಕೆಯಾಗುತ್ತಿಲ್ಲ ಎಂಬ ದೂರುಗಳಿವೆ. ಪಂಪಿಗ್ ಸಮಸ್ಯೆ, ಪೈಪ್‌ಲೈನ್ ಸೇರಿದಂತೆ ಇತರೆ ಕಾಮಗಾರಿಗಳಿದ್ದಲ್ಲಿ ತ್ವರಿತವಾಗಿ ಪೂರ್ಣಗೊಳಿಸಬೇಕು ಎಂದು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಅಧಿಕಾರಿಗಳಿಗೆ ಸೂಚಿಸಿದರು.

ಅಧಿಕಾರಿಗಳು ಮತ್ತು ಇಂಜಿನಿಯರ್‌ಗಳ ನಡುವೆ ಸಮನ್ವಯದ ಕೊರತೆ ಇರುವುದು



ಎದ್ದು ಕಾಣುತ್ತಿದೆ. ಇಂಜಿನಿಯರಿಂಗ್ ವಿಭಾಗದಲ್ಲಿ ಸಾಕಷ್ಟು ಸಿಬ್ಬಂದಿ ಮತ್ತು ಹಣದ ಲಭ್ಯತೆ ಇದ್ದರೂ ಕೆಲಸಗಳು ನಡೆಯುತ್ತಿಲ್ಲ. ಅಗತ್ಯವಿದ್ದರೆ ಹೆಚ್ಚುವರಿ ಪಂಪ್‌ಗಳನ್ನು ಅಳವಡಿಸಿ ನೀರಿನ ಸಮಸ್ಯೆ ಬಗೆಹರಿಸಬೇಕು ಎಂದು ತಿಳಿಸಿದರು. ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗುವ ಮುನ್ನವೇ ಅಧಿಕಾರಿಗಳು ಎಚ್ಚೆತ್ತುಕೊಳ್ಳಬೇಕು ಎಂದು ಮುಖ್ಯಮಂತ್ರಿಯವರು ನೀಡಿದ್ದಾರೆ. ಹಾಗಾಗಿ ನೀರಿನ ಅಭಾವ ತಲೆದೋರುವ ಸಂಭವವಿರುವ ಪ್ರದೇಶಗಳಲ್ಲಿ ಸಾರ್ವಜನಿಕರಿಗೆ ತೊಂದರೆಯಾಗದತೆ ಪರ್ಯಾಯ ವ್ಯವಸ್ಥೆಗಳನ್ನು ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಆರ್‌ಓ ಘಟಕಗಳ ನಿರ್ವಹಣೆಗೆ ಕ್ರಮವಹಿಸಬೇಕು. ಕುಡಿಯುವ ನೀರು ಎಲ್ಲೂ ಕಲುಷಿತಗೊಳ್ಳದಂತೆ ಎಚ್ಚರ ವಹಿಸಬೇಕು. ನಗರ ಮತ್ತು ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರು ಸಮಸ್ಯೆಯಾದಲ್ಲಿ ನೀರಿನ ಟ್ಯಾಂಕರ್ ಇರಿಸಿಕೊಳ್ಳಬೇಕು. ಮುಖ್ಯವಾಗಿ ಟ್ಯಾಂಕರ್ ಗಳ ಸ್ಥಿತಿ ಪರಿಶೀಲಿಸಬೇಕು ಎಂದು ಸೂಚನೆ ನೀಡಿದರು.

ಜಿಲ್ಲೆಯಲ್ಲಿ ಜಾನುವಾರುಗಳಿಗೆ ಯಾವುದೇ ರೀತಿಯ ಮೇವಿನ ಸಮಸ್ಯೆ ಇಲ್ಲ. ಆದರೂ ಸಹ ಉಲ್ಬಣಗೊಳ್ಳದಂತೆ ಅಗತ್ಯ ಮೇವಿನ ದಾಸ್ತಾನು ಇಟ್ಟುಕೊಳ್ಳಲು ಕ್ರಮ ಕೈಗೊಳ್ಳಬೇಕು ಎಂದು ಪಶುಸಂಗೋಪನಾ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಬಿಸಿಲಿನ ತಾಪಮಾನದ ಅಲೆ ಕುರಿತು ಜಾಗೃತಿ ಮೂಡಿಸಿ:

ಜಿಲ್ಲೆಯಲ್ಲಿ ಬಿಸಿಲಿನ ತಾಪಮಾನ ಅಲೆಗಳ ಪ್ರಖರತೆ ಹೆಚ್ಚಾಗುತ್ತಿದ್ದು, ಈ ಕುರಿತು ಸಾರ್ವಜನಿಕರಿಗೆ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಕುರಿತು ಜಾಗೃತಿ ಕಾರ್ಯಕ್ರಮಗಳ ಮೂಲಕ ಮತ್ತು ಸಾಮಾಜಿಕ ಜಾಲತಾಣಗಳ ಮೂಲಕ ಅರಿವು ಮೂಡಿಸಬೇಕು ಎಂದು ಸಂಬಂಧಿಸಿದ ಇಲಾಖೆಗಳ ಮುಖ್ಯಸ್ಥರಿಗೆ ನಿರ್ದೇಶನ ನೀಡಿದರು.

ಮುಂಗಾರು ಪೂರ್ವ ಮಳೆ ಆರಂಭಗೊಳ್ಳಲಿದ್ದು, ಗುಡುಗು-ಸಿಡಿಲು ಸಹಿತ ಮಳೆಯಲ್ಲಿ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಕುರಿತು ಸಿಡಿಲು ಆಪ್ ಅಭಿವೃದ್ಧಿ ಪಡಿಸಲಾಗಿದ್ದು, ಇದರ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು ಎಂದು ತಿಳಿಸಿದ ಜಿಲ್ಲಾಧಿಕಾರಿಯವರು, ನಗರ, ಸ್ಥಳೀಯ ಸಂಸ್ಥೆಗಳಲ್ಲಿ ಮಳೆ ನೀರು ಸರಾಗವಾಗಿ ಹರಿಯಲು ರಾಜಕಾಲುವೆಗಳನ್ನು ಸ್ವಚ್ಛಗೊಳಿಸಬೇಕು ಎಂದು ಸಂಬಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸುಮನ್ ಡಿ.ಪನ್ನೇಕರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರಿಸ್ ಸುಮೇರ್, ಮಹಾನಗರ ಪಾಲಿಕೆ ಆಯುಕ್ತ ಪಿ.ಎಸ್. ಮಂಜುನಾಥ್, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾಧಿಕಾರಿ ಅಬ್ದುಲ್ ರೆಹಮಾನ್ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಹಿಂದೂ ಧರ್ಮ ಪುನರುಜ್ಜೀವನಗೊಳಿಸಿದ ಆಧ್ಯಾತ್ಮ ಆದಿ ಶಂಕರಾಚಾರ್ಯರು-ಲಿಡ್ಕರ್ ಅಧ್ಯಕ್ಷ ಮುಂಡರಗಿ ನಾಗರಾಜ

ಬಳ್ಳಾರಿ,ಏ.22-

ಹಿಂದೂ ಧರ್ಮ ಪುನರುಜ್ಜೀವನಗೊಳಿಸಿದ ಆಧ್ಯಾತ್ಮ ಆದಿ ಶಂಕರಾಚಾರ್ಯರು. ಸಮಾಜವನ್ನು ಸುಸ್ಥಿತಿಗೆ ಕೊಂಡೊಯ್ಯುವಲ್ಲಿ ಆದಿ ಶಂಕರಾಚಾರ್ಯರ ಪಾತ್ರ ಅತ್ಯಂತ ಪ್ರಮುಖವಾಗಿದೆ ಎಂದು ಡಾ.ಬಾಬು ಜಗಜೀವನ್‌ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಮುಂಡರಗಿ ನಾಗರಾಜ್ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಸಂಗನಕಲ್ಲು ರಸ್ತೆಯ ಭಾರತಿ ತೀರ್ಥ ಸಭಾಭವನದಲ್ಲಿ ಮಂಗಳವಾರ ಆಯೋಜಿಸಿದ್ದ ಆದ್ಯ ಗುರು ಶ್ರೀ ಶಂಕರಾಚಾರ್ಯರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ದೇಶದ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಮಠಗಳನ್ನು (ದಕ್ಷಿಣದಲ್ಲಿ ಶೃಂಗೇರಿ, ಪಶ್ಚಿಮದಲ್ಲಿ ದ್ವಾರಕಾ, ಪೂರ್ವದಲ್ಲಿ ಪುರಿ ಜಗನ್ನಾಥ ಮತ್ತು ಉತ್ತರದಲ್ಲಿ ಬದರಿನಾಥ) ಸ್ಥಾಪಿಸುವ ಮೂಲಕ ವೇದಾಂತದ ಪುನರುಜ್ಜೀವನ ಮತ್ತು ಹಿಂದೂ ಧರ್ಮದ ಏಕತೆಯನ್ನು ಬಲಪಡಿಸಿದವರು ಎಂದು ತಿಳಿಸಿದರು.

2018 ರಲ್ಲಿ ಸ್ಥಾಪನೆಯಾದ ಬ್ರಾಹ್ಮಣ ಅಭಿವೃದ್ಧಿ ನಿಗಮಕ್ಕೆ 2025-26 ನೇ ಸಾಲಿನಲ್ಲಿ ರಾಜ್ಯ ಸರ್ಕಾರ 60 ಕೋಟಿ ರೂ. ಅನುದಾನ ನೀಡಿದೆ. ಸಮುದಾಯದ ಯುವಕರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು 20 ರಿಂದ 30 ಕೋಟಿ ರೂ. ಮೀಸಲಿಡಲಾಗಿದ್ದು, ಇದರಲ್ಲಿ ಶೇ. 50



ರಷ್ಟು ಸಬ್ಸಿಡಿ ದೊರೆಯಲಿದೆ. ಬಡ ಬ್ರಾಹ್ಮಣ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕಾಗಿ 10 ರಿಂದ 15 ಕೋಟಿ ರೂ. ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ. ತುರ್ತು ವೈದ್ಯಕೀಯ ನೆರವಿಗೆ 3 ರಿಂದ 5 ಕೋಟಿ ರೂ. ಹಾಗೂ ಮಹಿಳಾ ಉದ್ಯಮಿಗಳಿಗೆ ನೆರವಾಗಲು 5 ರಿಂದ 10 ಕೋಟಿ ರೂ. ಮೀಸಲಿಡಲಾಗಿದೆ ಎಂದು ತಿಳಿಸಿದರು.

ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ ಅವರು ಮಾತನಾಡಿ, ಮಾನವನಲ್ಲಿ ದೇವರನ್ನು ಕಾಣುವುದೇ ಕಷ್ಟವಿರುವ ಕಾಲದಲ್ಲಿ, ಪ್ರತಿಯೊಬ್ಬ ವ್ಯಕ್ತಿಯ ಆತ್ಮದಲ್ಲೂ ಪರಮಾತ್ಮನಿದ್ದಾನೆ ಎಂದು ಸಾರಿದ ಆದಿ ಶಂಕರಾಚಾರ್ಯರ ಅದ್ವೆತ ಸಿದ್ಧಾಂತ ಜಗತ್ತಿಗೆ ಶ್ರೇಷ್ಠ ಕೊಡುಗೆಯಾಗಿದೆ ಎಂದು ಹೇಳಿದರು.

ಮನುಷ್ಯ ಬದುಕಿರುವಾಗಲೇ ಸತ್ಸಂಗ ಮತ್ತು ನಿಸ್ಸಂಗದ ಮೂಲಕ ಮೋಹವನ್ನು ತೊರೆದು ಜೀವನ ಮುಕ್ತಿಯನ್ನು ಪಡೆಯಬಹುದು ಎಂದು ಎಂಟನೇ ಶತಮಾನದಲ್ಲೇ ಸಾರಿದ ಮಹಾನ್ ವ್ಯಕ್ತಿ ಶಂಕರಾಚಾರ್ಯರು. ಕರ್ನಾಟಕದ ಶೃಂಗೇರಿಯಲ್ಲಿ ಶಾರದಾ ಪೀಠವನ್ನು ಸ್ಥಾಪಿಸುವ ಮೂಲಕ ಅಧ್ಯಾತ್ಮದ ತಳಹದಿಯನ್ನು ಬಲಪಡಿಸಿದರು. ಬ್ರಾಹ್ಮಣ ಸಮುದಾಯವು ನಾಡು-ನುಡಿ ಮತ್ತು ದೇಶ ಕಟ್ಟುವಲ್ಲಿ ಅಪಾರ ಕೊಡುಗೆ ನೀಡಿದೆ ಎಂದು ಅವರು ಶ್ಲಾಘಿಸಿದರು.

ಸರ್ ಎಂ.ವಿಶ್ವೇಶ್ವರಯ್ಯನವರು ತುಂಗಭದ್ರಾ ಅಣೆಕಟ್ಟು ಕಟ್ಟಿದರೆ, ಬ್ರಾಹ್ಮಣ ಸಮುದಾಯದ ಮೇಧಾವಿ ಇಂಜಿನಿಯರ್ ತಿರುಮಲೆ ಅಯ್ಯಂಗಾರ್ ಅವರು ಸ್ವಾತಂತ್ರ್ಯ ಬಂದ ಕೇವಲ ಮೂರು ವರ್ಷಗಳಲ್ಲಿ ಆ ಬೃಹತ್ ಪ್ರಾಜೆಕ್ಟ್ ಅನ್ನು ಪೂರ್ಣಗೊಳಿಸಿ ಈ ಭಾಗದ ಜನರಿಗೆ ನೀರಾವರಿ ಸೌಲಭ್ಯ ಕಲ್ಪಿಸಿದರು. ಸಮಾಜಕ್ಕೆ ಉತ್ತಮ ಸಂಸ್ಕಾರ ಕಲಿಸುವಲ್ಲಿ ಮತ್ತು ಭಾರತವನ್ನು ಶಕ್ತಿಯುತ ರಾಷ್ಟವನ್ನಾಗಿ ಮಾಡುವಲ್ಲಿ ಈ ಸಮುದಾಯ ಯಾವಾಗಲೂ ಮುಂಚೂಣಿಯಲ್ಲಿದೆ.

ಕಾಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಸತತ ಎರಡನೇ ವರ್ಷ ಶಂಕರಾಚಾರ್ಯ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸುತ್ತಿದೆ. ಸಿದ್ದರಾಮಯ್ಯನವರ ಸರ್ಕಾರ ಎಲ್ಲಾ ಧರ್ಮ ಮತ್ತು ಜಾತಿಗಳನ್ನು ಸಮಾನವಾಗಿ ಪ್ರೀತಿಸುತ್ತದೆ ಎಂಬುದಕ್ಕೆ ಇಂತಹ ಜಯಂತಿಗಳ ಆಚರಣೆಯೇ ಸಾಕ್ಷಿ ಎಂದು ಅವರು ಅಭಿಪ್ರಾಯಪಟ್ಟರು.

ಬಳ್ಳಾರಿಯ ರಾಮಕೃಷ್ಣ ಆಶ್ರಮದ ಪೂಜ್ಯಶ್ರೀ ಸ್ವಾಮಿ ಮಂಗಳನಾಥಾನದಜಿ ಮಹಾರಾಜ್ ಅವರು ವಿಶೇಷ ಉಪನ್ಯಾಸದಲ್ಲಿ ಮಾತನಾಡಿ, ಕ್ರಿಸ್ತಶಕ 788 ರ ಸುಮಾರಿಗೆ ಕೇರಳದ ಕಾಲಡಿಯಲ್ಲಿ ಶಿವಗುರು ಮತ್ತು ಆರ್ಯಾಂಬ ದಂಪತಿಗಳ ಪುತ್ರರಾಗಿ ಜನಿಸಿದ ಶಂಕರಾಚಾರ್ಯರು, ಬಾಲ್ಯದಲ್ಲೇ ಮೇಧಾವಿಗಳಾಗಿದ್ದರು. ಎಂಟನೇ ವಯಸ್ಸಿಗೆ ವೇದಗಳನ್ನು ಅಭ್ಯಾಸ ಮಾಡಿ ತಾಯಿಯ ಅನುಮತಿಯೊಂದಿಗೆ ಸನ್ಯಾಸ ಸ್ವೀಕರಿಸಿದರು. ಭಜಗೋವಿಂದ, ವಿವೇಕ ಚೂಡಾಮಣಿ ಸೇರಿದಂತೆ ಉಪನಿಷತ್ತುಗಳು, ಬ್ರಹ್ಮಸೂತ್ರ ಮತ್ತು ಭಗವದ್ಗೀತೆಯ ಮೇಲೆ ಭಾಷ್ಯಗಳನ್ನು ಬರೆದಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಮುದಾಯದವರನ್ನು ಗಣ್ಯರು ಸನ್ಮಾನಿಸಿ ಗೌರವಿಸಿದರು. ಬಳ್ಳಾರಿಯ ಕೆ.ಶಾಂತಶಾಸ್ತ್ರಿ ತಂಡದಿದ ಭಕ್ತಿ ಸಂಗೀತ ಪ್ರಸ್ತುತಪಡಿಸಿದರು.

ಈ ವೇಳೆ ಬಳ್ಳಾರಿಯ ಸಭಾಪತಿ ಬೀದಿಯ ಶ್ರೀ ಶೃಂಗೇರಿ ಶಂಕರಮಠದ ಮಠಾಧಿಕಾರಿ ಕೆ.ರವಿಶಾಸ್ತ್ರಿ, ಮಹಾನಗರ ಪಾಲಿಕೆ ಸದಸ್ಯೆ ಸುರೇಖಾ ಮಲ್ಲನಗೌಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಸೇರಿದಂತೆ ಸಮಾಜದ ಮುಖಂಡರು ಹಾಗೂ ಮತ್ತೀತರರು ಉಪಸ್ಥಿತರಿದ್ದರು.



ಶರಣರಿಂದಲೇ ಸಮಸಮಾಜ ಪರಿಕಲ್ಪನೆ ಸಾಧ್ಯವಾಯಿತು: ಚಿಂತಕಿ ಡಾ.ದಾನಮ್ಮ ಝಳಕಿ

ಕೊಪ್ಪಳ ಏ.22-

ಪ್ರತಿಯೊಂದು ವೃತ್ತಿಗೆ ಗೌರವ ನೀಡುತ್ತ, ಶ್ರಮ ಸಂಸ್ಕೃತಿಗೆ ಆದ್ಯತೆ ನೀಡಿ ಸಮಸಮಾಜದ ಪರಿಕಲ್ಪನೆ ನೀಡಿದ್ದೇ ಶರಣರು ಎಂದು ಚಿಂತಕಿ ಡಾ.ದಾನಮ್ಮ ಝಳಕಿ ಅವರು ಹೇಳಿದರು.

ಜಿಲ್ಲಾಡಳಿತದಿಂದ ಏಪ್ರಿಲ್ 20ರಂದು ಗವಿಮಠದ ಆವರಣದಲ್ಲಿ ನಡೆದ ಬಸವ ಜಯಂತ್ಯುತ್ಸವ ಸಮಾರಂಭದಲ್ಲಿ ಬಸವಗೋಷ್ಠಿ ನಡೆಸಿದ ಅವರು, ಶರಣರು ಕಟ್ಟಿದ ಸಮಾಜದಲ್ಲಿ ಪ್ರಜಾಪ್ರಭುತ್ವದ ಬೀಜಗಳಿವೆ. ವಚನದ ಮೂಲಕ ಶರಣರು ಸಮಾಜ ಸುಧಾರಣೆ ಮಾಡಿದರು ಎಂದು ತಿಳಿಸಿದರು.

ಜಾತಿ, ವರ್ಗ ರಹಿತ ಧರ್ಮ ಎಂದರೆ ಶರಣರು 12ನೇ ಶತಮಾನದಲ್ಲಿ ಕಟ್ಟಿದ ಲಿಂಗಾಯತ ಧರ್ಮವಾಗಿದೆ. ಕಾಯಕದ ಪರಿಕಲ್ಪನೆ ಮೂಲಕ ಬಸವಣ್ಣನವರು ಕಾಯಕ, ವೃತ್ತಿಗೆ ವಿಶೇಷ ಗೌರವ, ಶ್ರಮಕ್ಕೆ ಗೌರವ ತಂದು ಕೊಟ್ಟರು. ಕಾಯಕ, ದಾಸೋಹ ತತ್ವದ ಮೂಲಕ ಸಮಷ್ಠಿ ಭಾವದ ಆಶಯ ಮೂಡಿಸಿದರು ಎಂದರು. ಆಗ ಬರವಣಿಗೆ ಇರಲಿಲ್ಲ; ಮಾತಿನಿಂದ ಮಾತಿಗೆ ಆಗಿನ ವಿಚಾರ ಹಬ್ಬಿತು. ಗುರು ಎಂದರೆ ವ್ಯಕ್ತಿ ಅಲ್ಲ ಅದು ಅರಿವು ಎಂದು ತಿಳಿಸಿದರು.

ಶೋಷಿತ ವರ್ಗದ ಜನರು ಮತ್ತು ಅಲ್ಪಸಂಖ್ಯಾತರು ನೊಂದಿರುವ ಸಮಯದಲ್ಲಿ ವೈದಿಕ ಧರ್ಮದ ವಿರುದ್ಧ ಕಿಡಿಯಾಗಿ, ಹಿರಿಯರು, ಕಿರಿಯರು ಎನ್ನದೇ, ಮೇಲು ಕೀಳು ಎನ್ನದೇ ಎಲ್ಲರೂ ಒಂದೇ ಎಂದು ಸಮಾನತೆ ಸಂದೇಶವನ್ನು ಬಸವಣ್ಣನವರು ನೀಡಿದರು. ಗಂಡು ಹೆಣ್ಣು ಎಂದು ಬೇಧಭಾವ ಮಾಡಬೇಡಿ ಇಬ್ಬರು ಸಮಾನರು ಎನ್ನುವ ಸಂದೇಶ ನೀಡಿದರು. ಕಾಯಕ ಎಂಬುದು ಚೈತನ್ಯದ ಪ್ರತೀಕ. ಅದು ಆತ್ಮಗೌರವ ಮೂಡಿಸುತ್ತದೆ. ಶರಣರು ಕಾಯಕಕ್ಕೆ ಅತೀ ಹೆಚ್ಚಿನ ಮಹತ್ವ ನೀಡಿದರು. ಶರಣರು ಶ್ರಮ ಸಂಸ್ಕೃತಿಗೆ ಆದ್ಯತೆ ನೀಡಿ ಸಮಸಮಾಜ ನಿರ್ಮಾಣಕ್ಕೆ ಶ್ರಮಿಸಿದರು ಎಂದರು. ಶರಣೆಯರು ಮೌನ ಒಡೆದ ಧ್ವನಿಗಳಾಗಿದ್ದಾರೆ. ಮೌನವಾಗಿರದೇ ಅವರು ಪ್ರಶ್ನೆ ಮಾಡಿ ಬದುಕಿದರು. ಸತ್ಯ ಶುದ್ಧ ಕಾಯಕದ ಮೂಲಕ ವೃತ್ತಿ ಗೌರವವನ್ನು 33ಕ್ಕು ಹೆಚ್ಚು ಶರಣೆಯರು ಕಾಪಾಡಿದರು. ಹೆಣ್ಣಿಗೆ ಪ್ರತ್ಯೇಕ ಸಾಧನೆ ಸಿಗಬೇಕು. ಆತ್ಮಸಾಧನೆಗೆ ಲಿಂಗ ಅಡ್ಡಬರಬಾರದು ಎಂಬುದು ಶರಣೆಯರ ಪ್ರತಿಪಾದನೆಯಾಗಿತ್ತು ಎಂದು ತಿಳಿಸಿದರು. ನಿತ್ಯ ಜಯಂತಿಯಾಗಲಿ: ಸಮಸಮಾಜ ನಿರ್ಮಾಣದ ಆಶಯ ಹೊಂದಿದ ವಚನಗಳ ಸಂದೇಶವನ್ನು ನಾವು ನಮ್ಮ ಮಕ್ಕಳಿಗೆ ತಿಳಿಸಿ ಬೆಳೆಸೋಣ. ಬಸವ ಜಯಂತಿಯಲ್ಲಿ ನಾವೆಲ್ಲ ಈ ಸಂಕಲ್ಪ ಮಾಡಿ ಕಾರ್ಯಪ್ರವೃತ್ತರಾಗುವ ಮೂಲಕ ಬಸವ ಜಯಂತಿಯನ್ನು ನಿತ್ಯ ಜಯಂತಿಯಾಗಿಸೋಣ ಎಂದು ಅವರು ತಿಳಿಸಿದರು.

ಒಂದನೇಯ ಪುಟದಿಂದ

ಜಗದ್ಗುರು ಶಂಕರಾಚಾರ್ಯರ ಜಯಂತಿ ಆಚರಣೆ

ಪ್ರಚಾರಕ್ಕೆ ಹೊಸ ದಿಕ್ಕು ನೀಡಿದವರು ಎಂದು ನಾಡಗೌಡ ಅವರು ಹೇಳಿದರು.

ಈ ಸಂದರ್ಭದಲ್ಲಿ ತಹಸಿಲ್ದಾರ್ ಅರುಣ್ ಹೆಚ್ ದೇಸಾಯಿ. ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ. ವೈ ಅನಿಲ್ ಕುಮಾರ್.¸ ಪಿ ಕಾರ್ಡ್ ಬ್ಯಾಂಕ್ ಅಧ್ಯಕ್ಷ. ಎಂ ದೊಡ್ಡ ಬಸವರಾಜ. ತಾಲೂಕ ಬ್ರಾಹ್ಮಣ ಸಮಾಜದ ಅಧ್ಯಕ್ಷ ಕೆ ಗೋವಿಂದರಾವ್. ಮುಖಂಡರಾದ ನರಸಿಂಹ ಆಚಾರ್ಯ ಮತಾಧಿಕಾರಿ. ಈರೇಶ್ ಇ ಲ್ಲೂರ್.¸ ಹೆಚ್ ಎನ್ ಬಡಿಗೇ.¸ ವೆಂಕಟರಾವ್ ಬಂಡಿ ಗುಂಡುರಾವ್ ಚನ್ನಳ್ಳಿ. ನಾರಾಯಣರಾವ್ ದೇಸಾಯಿ. ಭೀಮಸೇನ್ ಜಾಗೀರ್ದಾ.¸ ಅವಿನಾಶ್ ಬಂಡಿ ಮುಂತಾದವರು ಉಪಸ್ಥಿತರಿದ್ದರು.

ರಾಮಲಿಂಗೇಶ್ವರ ಮೈದಾನದಲ್ಲಿ 12 ಕೋಟಿ ವೆಚ್ಚದ ಕಲ್ಯಾಣ ಮಂಟಪಕ್ಕೆ ಭೂಮಿ ಪೂಜೆ

ಹಾಗೂ ಸಾಮಾಜಿಕ ಕಾರ್ಯಕ್ರಮಗಳ ಆಯೋಜನೆಗೆ ಅನುಕೂಲವಾಗುವ ನಿಟ್ಟಿನಲ್ಲಿ ಈ ಕಲ್ಯಾಣ ಮಂಟಪವನ್ನು ನಿರ್ಮಿಸಲಾಗುತ್ತಿದೆ ಎಂದು ತಿಳಿಸಿದರು.

ಭೀಮ್ ಜಯಂತಿ ಸಂಭ್ರಮ: ದಲಿತ ಶಕ್ತಿಪಡೆಯಿಂದ ಬೃಹತ್ ಜಾಥಾ

ಕಾರ್ಯಕ್ರಮ ನಡೆಯಲಿದ್ದು, ಡಾ.ಅಂಬೇಡ್ಕರ್ ಅವರ ಜೀವನ, ಸಾಧನೆ ಹಾಗೂ ಸಮಾಜಕ್ಕೆ ಅವರು ನೀಡಿದ ಕೊಡುಗೆಗಳ ಕುರಿತು ವಿಶೇಷ ಉಪನ್ಯಾಸಗಳನ್ನು ಆಯೋಜಿಸಲಾಗಿದೆ. ಸಮಾಜದಲ್ಲಿ ಸಮಾನತೆ, ನ್ಯಾಯ ಮತ್ತು ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸುವುದು ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿದೆ ಎಂದು ಅವರು ಹೇಳಿದರು.

ಈ ಐತಿಹಾಸಿಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಎಲ್ಲಾ ಅಂಬೇಡ್ಕರ್ ಅನುಯಾಯಿಗಳು, ಸಂಘ ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ವಿಶ್ವನಾಥ್ ಬಲ್ಲಿದವ್, ದೀಪಕ್ ಭಂಡಾರಿ, ಮಾರ್ಕೆಟ್ ರಾಜು, ನರಶಿಂಹಲು, ವೀರೇಶ್ ಸೇರಿದಂತೆ ಮತ್ತಿತರರು ಹಾಜರಿದ್ದರು.

ನಗರದಲ್ಲಿ ಇತಿಹಾಸ ಸೃಷ್ಟಿಸಿದ ಬಸವ ಜಯಂತಿ ಮೆರವಣಿಗೆ

ರಸ್ತೆ, ಶೆಟ್ಟಿಭಾವಿ ವೃತ್ತ, ಸರಾಫ್ ಬಜಾರ, ತೀನ್ ಕಂದೀಲ್ ವೃತ್ತ, ಕೇಂದ್ರ ತರಕಾರಿ ಮಾರುಕಟ್ಟೆಯ ಬಟ್ಟೆ ಬಜಾರ, ಮಹಾವೀರ ವೃತ್ತ, ಅರಭ್ ಮೊಹಲ್ಲಾ ರಸ್ತೆ, ಮಹಾತ್ಮಾ ಗಾಂಧಿ ವೃತ್ತದ ನಂತರ ಬಸವೇಶ್ವರ ರಸ್ತೆಯ ಮೂಲಕ ವೀರಶೈವ ಮಹಾಂತೇಶ ಕಲ್ಯಾಣ ಮಂಡಪವನ್ನು ತಲುಪಿತು.

ದೇವಸ್ಥಾನದಿಂದ ಪ್ರಾರಂಭವಾದ ಮೆರವಣಿಗೆ ಪೋಲೀಸ್ ಇಲಾಖೆಯಿಂದ ಬಸವರಾಜ ಪಿ.ಎಸ್.ಐ. ರವರ ನೇತೃತ್ವದಲ್ಲಿ ಭಾರೀ ಭದ್ರತೆಯನ್ನು ನೀಡಿದ್ದರು.

ಮೆರಣಿಗೆಯ ಪ್ರಾರಂಭದಲ್ಲಿ ಸಾರ್ವಜನಿಕರ ಆರೋಗ್ಯ ದೃಷ್ಠಿಯಿಂದ ದೇವಸ್ಥಾನದಲ್ಲಿ ತಂಪಾದ ಮಜ್ಜಿಗೆಯ ವ್ಯವಸ್ಥೆಯನ್ನು ಮಾಡಲಾಯಿತ್ತು ನೂರಾರು ಸದ್ಭಕ್ತರು ಮಹಿಳೆಯರಿಗೆ ಮಜ್ಜಿಗೆಯನ್ನು ವಿತರಿಸಲಾಯಿತು.

ಈ ಸಂದರ್ಭದಲ್ಲಿ ದೇವಸ್ಥಾನದ ಅರ್ಚಕರಾದ ಶಶಿಕುಮಾರ ಸ್ವಾಮಿ, ವೀರೇಶ ಸ್ವಾಮಿ, ವೀರಶೈವ ಲಿಂಗಾಯತ ಸಮಾಜದ ಉಪಾಧ್ಯಕ್ಷರಾದ, ಅಶೋಕ ಪಾಟೀಲ, ಶಿವಬಸ್ಸ ಪ್ಪ ಮಾಲಿ ಪಾಟೀಲ, ಎಸ್.ಎಲ್. ಕೇಶವರೆಡ್ಡಿ, ಯಾಪಲದಿನ್ನಿ ಉದಯಕುಮಾರ, ಎ.ಎಸ್. ಪಾಟೀಲ ಎಲ್.ಐ.ಸಿ., ವಿರುಪನಗೌಡ ಬಂಡಿ, ಗಿರಿಮಲ್ಲಪ್ಪ ಕರಡಕಲ, ಅಯ್ಯಣ್ಣ ಮಹಾಮನಿ, ಚುಕ್ಕಿ ಶಿವನಂದ ಸಾಹುಕಾರ, ಅರವಿ ನಾಗನಗೌಡ, ಪವನಕಿಶೋರ ಪಾಟೀಲ, ಶರಣಬಸಪ್ಪ ಅರಳಿ, ಎಸ್.ಬಿ.ಪಾಟೀಲ, ಸಿ.ಬಿ. ಪಾಟೀಲ, ಕೂಡ್ಲಿಗಿ ರಾಚನಗೌಡ, ಮಿರ್ಜಾಪೂ ಅಶೋಕಪ್ಪಗೌಡ, ಸಿದ್ದನಗೌಸ ಎಂ., ಸಿದ್ದನಗೌಡ ಎಸ್., ಚನ್ನಬಸವನಗೌಡ ಮಿರ್ಜಾಪೂರ, ನಿರ್ಮಲಾ ಬೆಣ್ಣೆ, ವಿನೋದಗೌಡ ಚಾಗಲ, ಸಂಪತಕುಮಾರ, ಯಾಪಲದಿನ್ನಿ, ಮಲ್ಲಿಕಾರ್ಜುನ ಗಣೇಕಲ, ಪ್ರಭುಶಾಸ್ತ್ರಿ, ಪರಮೇಶ್ವರ ಸಾಲಿಮಠ, ಶಿವಯೋಗಿ ಪಾಟೀಲ, ಶರಣಬಸವ ಹಿರೇಮಠ ಸುರಭಿ, ವಿಜಯಕುಮಾರ ಪಾಟೀಲ ಶಾವಂತಗೇರಿ, ಎಸ್.ಜಿ. ಕಲ್ಲಯ್ಯ ಸ್ವಾಮಿ, ಆದೋನಿ ಬಸಂತ, ವಿಜಯಕುಮಾರ ಸಜ್ಜನ, ಮಲ್ಲಿಕಾರ್ಜುನ ಪಾಟೀಲ ಅಂಭಾ ಸ್ಟುಡಿಯೋ, ಮಲ್ಲಿಕಾರ್ಜುನ ಸ್ವಾಮಿ, ಎ.ಎಸ್. ಐ.ಬಸವರಾಜ ಸ್ವಾಮಿ ಯರಡೋಣಿ, ಪೋಲಿಸ ಬಸವರಾಜ ಸ್ವಾಮಿ, ಸಿದ್ದಯ್ಯ ಸ್ವಾಮಿ ಕೇದಾರ, ಪಿಕಳಿಹಾಳ ಅಯ್ಯಪ್ಪ ಸ್ವಾಮಿ ಹಿರೇಮಠ, ಬಸ್ಸ ಯ್ಯ ಸ್ವಾಮಿ ಎಲ್.ಬಿ.ಎಸ್. ನಗರ ಹಾಗೂ ವೀರಶೈವ ಲಿಂಗಾಯತ ಸಮಾಜದ ಸರ್ವ ಗುರು ಹಿರಿಯರು, ಮುಖಂಡರು, ಜನಪ್ರತಿನಿಧಿಗಳು ನೂರಾರು ಮಹಿಳೆಯರು ಯುವಕರು ಮಕ್ಕಳು ಉಪಸ್ಥಿತರಿದ್ದರು.

ಮಹಿಳಾ ಮೀಸಲಾತಿ ಮಸೂದೆ ವಿರೋಧ: ಕಾಂಗ್ರೆಸ್ ವಿರುದ್ಧ ಶಾಸಕಿ ಕರೆಮ್ಮ ಜಿ ನಾಯಕ ಕಿಡಿ

ಮಸೂದೆ ಜಾರಿಗೆ ತರದ ಕಾಂಗ್ರೆಸ್, ಈಗ ಜಾರಿಗೆ ಬರಲು ಸನ್ನದ್ಧವಾಗಿರುವ ಸಂದರ್ಭದಲ್ಲಿ ಕ್ಷುಲ್ಲಕ ಕಾರಣಗಳನ್ನು ನೀಡಿ ವಿರೋಧಿಸುತ್ತಿರುವುದು ಅವಕಾಶವಾದಿ ರಾಜಕಾರಣದ ಉದಾಹರಣೆಯಾಗಿದೆ ಎಂದು ಹೇಳಿದರು.

ಇದು ಕೇವಲ ಮಸೂದೆಗೆ ನೀಡಿದ ವಿರೋಧವಲ್ಲ, ದೇಶದ ಪ್ರತಿಯೊಬ್ಬ ಮಹಿಳೆಯ ಪ್ರಗತಿಗೆ ಅಡ್ಡಿಯಾಗುವ ಕ್ರಮವಾಗಿದೆ. ಮಹಿಳಾ ಶಕ್ತಿಗೆ ಅಪಮಾನ ಮಾಡುವ ಕಾಂಗ್ರೆಸ್‌ನ ಈ ಮಹಿಳಾ ವಿರೋಧಿ ನಿಲುವನ್ನು ತೀವ್ರವಾಗಿ ಖಂಡಿಸುತ್ತೇವೆ ಎಂದು ಅವರು ತಿಳಿಸಿದರು.

ಕುರುಕುಂದದಲ್ಲಿ ಭಕ್ತಿಯಿಂದ ಅದ್ದೂರಿಯಾಗಿ ನೆರವೇರಿದ ಶ್ರೀ ಅಂಬಾದೇವಿ ಮೂರ್ತಿ ಪ್ರಾಣ ಪ್ರತಿಷ್ಠಾಪನೆ



ಸಿಂಧನೂರು,ಏ.21

ತಾಲೂಕಿನ ಕುರುಕುಂದ ಗ್ರಾಮದಲ್ಲಿ ಶ್ರೀ ಅಂಬಾದೇವಿ ಮೂರ್ತಿ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮವು ಸೋಮವಾರ ಬಸವ ಜಯಂತಿ ದಿನದಂದು ಸಾಯಂಕಾಲ 6:30 ರಿಂದ ಸಂಜೆ 7:30 ರವರೆಗೆ ಮೂರನೇ ಮೈಲ್ ಕ್ಯಾಂಪಿನ ಸೋಮನಾಥ ಶಿವಾಚಾರ್ಯರು, ಹಾಗೂ ಗಲಗಿನ ಅಯ್ಯಣ್ಣ ತಾತ ಇವರ ನೇತೃತ್ವದಲ್ಲಿ ಹಾಗೂ ದೇವಸ್ಥಾನದ ಕಮಿಟಿ ಸದಸ್ಯರ ಮುಖ್ಯಸ್ಥಿಕೆಯಲ್ಲಿ ಶ್ರೀ ಅಂಬಾದೇವಿ ಮೂರ್ತಿ ಪ್ರಾಣ ಪ್ರತಿಷ್ಠಾಪನೆ ಭಕ್ತಿ-ಭಾವದಿಂದ ನೆರವೇರಿತು.

ಇದಕ್ಕೂ ಮುನ್ನ ಏ.16 ರಂದು ಮಧ್ಯಾಹ್ನ 3:30 ರಿಂದ ಸಂಜೆ 5:30 ರವರೆಗೆ ಡೊಳ್ಳು, ಭಜನೆ, ಭಾಜ-ಭಜಂತ್ರಿ ಹಾಗೂ ಕಳಸ ಕುಂಭದೊಂದಿಗೆ ಗ್ರಾಮದ ಪ್ರಮುಖ ಓಣಿಯಲ್ಲಿ ಅದ್ದೂರಿಯಾಗಿ ಮೆರವಣಿಗೆ ನಡೆಸಿ ಪುರ ಪ್ರವೇಶ ಮಾಡಲಾಗಿತ್ತು. ಭಕ್ತಿಯ ಕಾರ್ಯಕ್ರಮದಲ್ಲಿ ಕುರುಕುಂದ ಸೇರಿದಂತೆ ಸುತ್ತಮುತ್ತಲಿನ ಗ್ರಾಮದ ಸದ್ಭಕ್ತರು ಪಾಲ್ಗೊಂಡು ತನು ಮನ ಧನದಿಂದ ಸೇವೆ ಸಲ್ಲಿಸಿ ಶ್ರೀ ಅಂಬಾದೇವಿ ಕೃಪೆಗೆ ಪಾತ್ರರಾದರು.

ಈ ಸಂದರ್ಭದಲ್ಲಿ ಶೇಖರಯ್ಯಸ್ವಾಮಿ ಹಿರೇಮಠ, ಪಟ್ಟದ ಪೂಜಾರಿ, ಶರಣಪ್ಪ ಬಾಗಲವಾಡ, ಜಿಲ್ಲಾ ಪಂಚಾಯತಿ ಸದಸ್ಯ ಭೀಮಣ್ಣ, ಗ್ರಾ.ಪಂ.ಅಧ್ಯಕ್ಷ ಹುಲ್ಲೇಶ, ಸದಸ್ಯ ಗುಡೂರಪ್ಪ, ಹುಲುಗಪ್ಪ ಎಪಿಎಂಸಿ,ಯಂಕಪ್ಪ ಜಲ್ಲಿ, ದುರುಗಪ್ಪ ಬೊಂಬಾಯಿ, ವೀರೇಶ ಕುರುಕುಂದ, ಬಸವರಾಜ, ದೊಡ್ಡ ಮೌನೇಶ, ಲಕ್ಷ್ಮಣ ಬೊಂಬಾಯಿ, ದುರುಗಪ್ಪ ಶೇಷಗಿರಿ, ಮಹೇಶ ಹಲಗಿ, ಶ್ಯಾಮಣ್ಣ ಭೋವಿ, ವಾಸಪ್ಪ, ಲಕ್ಷ್ಮಮ್ಮ, ನಾಗಮ್ಮ, ಜಾನಮ್ಮ, ಮಹಾಂಕಾಳೆಮ್ಮ, ಲಚಮಮ್ಮ, ಸೇರಿದಂತೆ ನೂರಾರು ಭಕ್ತಾಧಿಗಳು ಭಾಗವಹಿಸಿದ್ದರು.

ಅನಾಥ ನಿರ್ಗತಿಕ ಕುಟುಂಬಗಳಿಗೆ ನೆರವಿನ ಕಾರ್ಯ ನಿರಂತರ: ಅಶೋಕ ನಲ್ಲಾ

ಸಿಂಧನೂರು: ನಗರದ ಕುಷ್ಟಗಿ ರಸ್ತೆಯ ಎಸ್.ಎಲ್.ವಿ ಹೊಟೇಲ್ ಹಿಂದುಗಡೆ ಇರುವ ಅಕ್ಷಯ ಆಹಾರ ಜೋಳಿಗೆ ಸೇವಾ ಟ್ರಸ್ಟ್ ಕಾರ್ಯಾಲಯವನ್ನು ಉದ್ಘಾಟಿಸಿ ನಂತರದಾನಿಗಳ ಸಹಕಾರದೊಂದಿಗೆ ಅನಾಥ ನಿರ್ಗತಿಕ ಕುಟುಂಬಕ್ಕೆ ಎರಡು ತಿಂಗಳಿಗೆ ಆಗುವಷ್ಟು ಕಿರಾಣಿ ಹಾಗೂ ಅಕ್ಕಿ ಪಾಕೆಟ್ ಲಿಂಗಸ್ಗೂರಿನ ರಾಮ್ ಬಾಬು ಹಾಗೂ ಚಂದ್ರಕಲಾ ಇವರ ಸಹಕಾರದಿಂದ ವಿತರಣೆ ಮಾಡಲಾಯಿತು.

ಇಬ್ಬರ ದಾನಿಗಳಿಗೆ ಸಂಸ್ಥೆ ವತಿಯಿಂದ ಅಭಿನಂದನೆ ಸಲ್ಲಿಸಿ, ಅಕ್ಷಯ ಆಹಾರ ಜೋಳಿಗೆ ಸೇವಾ ಟ್ರಸ್ಟ್ ಸಂಸ್ಥಾಪಕ ಕಾರ್ಯದರ್ಶಿ ಅಶೋಕ ನಲ್ಲಾ ಮಾತನಾಡಿ,

ತಾಲೂಕಿನ ವಿವಿಧ ಗ್ರಾಮಗಳಲ್ಲಿ ಹಾಗೂ ನಗರದ ವಾರ್ಡ್ ಗಳಲ್ಲಿ ಯಾವುದೇ ಸಭೆ ಸಮಾರಂಭಗಳಲ್ಲಿ ಉಳಿದ ಆಹಾರ ವ್ಯರ್ಥವಾಗುವುದನ್ನು ತಪ್ಪಿಸಲು ಉಳಿದ ಆಹಾರ ಶೇಖರಣೆ ಮಾಡಿ, ನಿರ್ಗತಿಕ ಮತ್ತು ಬಡ ಕುಟುಂಬಗಳಿಗೆ ವಿವಿಧೆಡೆ ಹಂಚುತಿದ್ದೇವೆ. ಇದರ ಜೊತೆಗೆ ಬಡ ಕುಟುಂಬಗಳಿಗೆ ನೆರವು ನೀಡುವ ಮೂಲಕ ನಾವು ಸದಾ ಇಂತಹ ಕುಟುಂಬಗಳಿಗೆ ಬೆನ್ನೆಲುಬಾಗಿ ನಿಲ್ಲುತ್ತೇವೆ ಎಂದರು.

ಸರ್ಕಾರಿ ನೌಕರರ ದಿನಾಚರಣೆ ಹಾಗೂ ಸರ್ವೋತ್ತಮ ಸೇವಾ ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಅಗತ್ಯ ಸಿದ್ಧತೆ ಕೈಗೊಳ್ಳಿ: ಡಾ. ಸುರೇಶ ಬಿ. ಇಟ್ನಾಳ

ಕೊಪ್ಪಳ, ಏ.22-

ಕೊಪ್ಪಳ ಜಿಲ್ಲಾಮಟ್ಟದ ಸರ್ಕಾರಿ ನೌಕರರ ದಿನಾಚರಣೆ ಹಾಗೂ ಸರ್ವೋತ್ತಮ ಸೇವಾ ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳಾದ ಡಾ. ಸುರೇಶ ಬಿ. ಇಟ್ನಾಳ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಮಟ್ಟದ ಸರ್ಕಾರಿ ನೌಕರರ ದಿನಾಚರಣೆ ಹಾಗೂ ಸರ್ವೋತ್ತಮ ಸೇವಾ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜನೆ ಸಂಬಂಧ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಏಪ್ರಿಲ್ 21ರಂದು ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪ್ರತಿ ವರ್ಷದಂತೆ ಈ ವರ್ಷವು ರಾಜ್ಯ ಸರ್ಕಾರಿ ನೌಕರರ ದಿನಾಚರಣೆ ಹಾಗೂ ಸರ್ವೋತ್ತಮ ಸೇವಾ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಜಿಲ್ಲಾಡಳಿತ ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಕೊಪ್ಪಳ ಜಿಲ್ಲಾ ಘಟಕದ ಸಹಯೋಗದಲ್ಲಿ ಇದೇ ಏಪ್ರಿಲ್ ಕೊನೆಯ ವಾರದಲ್ಲಿ ಅಥವಾ ಮೇ ತಿಂಗಳ ಮೊದಲನೇ ವಾರದಲ್ಲಿ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ನಲ್ಲಿ ಆಯೋಜಿಸಲಾಗಿದ್ದು, ರಾಜ್ಯ ಸರ್ಕಾರಿ ನೌಕರರ ದಿನಾಚರಣೆ ಕಾರ್ಯಕ್ರಮವನ್ನು ಶಿಷ್ಟಾಚಾರ ಪಾಲನೆಯೊಂದಿಗೆ ಅಚ್ಚುಕಟ್ಟಾಗಿ ಆಯೋಜಿಸುವಂತೆ ಎಲ್ಲಾ ಇಲಾಖೆಗಳ ಅಧಿಕಾರಿಗಳು ಅಗತ್ಯ ಕ್ರಮ ವಹಿಸಬೇಕು. ಈ ಕಾರ್ಯಕ್ರಮದ ಅಂಗವಾಗಿ ನೌಕರರಿಗೆ ಆರೋಗ್ಯ ತಪಾಸಣೆ ಮತ್ತು ಯೋಗ ಶಿಬಿರವನ್ನು ಹಮ್ಮಿಕೊಳ್ಳಬೇಕು ಮತ್ತು ಇದರ ಜೊತೆಗೆ ರಕ್ತದಾನ ಶಿಬಿರವನ್ನು ಸಹ ಆಯೋಜಿಸುವಂತೆ ಜಿಲ್ಲಾಧಿಕಾರಿಗಳು ಸಲಹೆ ನೀಡಿದರು.



ರಾಜ್ಯ ಸರ್ಕಾರಿ ನೌಕರರ ದಿನಾಚರಣೆ ಅಂಗವಾಗಿ ಅತ್ಯುತ್ತಮ ಸೇವೆ ಸಲ್ಲಿಸಿದ ಹಾಗೂ ಸಾಧನೆಗೈದ ನೌಕರರಿಗೆ ಜಿಲ್ಲಾ ಮಟ್ಟದ ಪ್ರಶಸ್ತಿ ನೀಡಿ ಸನ್ಮಾನಿಸಬೇಕಾಗಿದ್ದು, ಇದಕ್ಕಾಗಿ ಸೂಕ್ತ ಮತ್ತು ಅರ್ಹ ನೌಕರರನ್ನು ಗುರುತಿಸಿ, ಇಲಾಖೆಯ ಗುರಿ ಸಾಧನೆಯಲ್ಲಿ ವೃದ್ಧಿ, ನಾಯಕತ್ವ ಗುಣ ಮತ್ತು ಸಮಯಪ್ರಜ್ಞೆ, ಸೇವಾ ಕ್ಷೇತ್ರದಲ್ಲಿ ಗುಣಾತ್ಮಕ ಬದಲಾವಣೆ, ಸರ್ಕಾರದ ಹಣದ ಉಳಿತಾಯ ಮತ್ತು ಸಾರ್ವಜನಿಕ ಸ್ನೇಹಿ ಸೇವೆಗಳಂತಹ ಮಾದರಿ ಕಾರ್ಯಗಳನ್ನು ಮಾಡಿದ ಸಾಧಕರನ್ನು ಆಯ್ಕೆ ಮಾಡಬೇಕು ಎಂದರು.

ರಾಜ್ಯ ಸರ್ಕಾರಿ ನೌಕರರ ದಿನಾಚರಣೆ ಕಾರ್ಯಕ್ರಮದಲ್ಲಿ ವಿಶೇಷವಾಗಿ ಈ ಬಾರಿ ಸ್ವಚ್ಛ ಮತ್ತು ಸುಂದರವಾಗಿರುವ ಕಚೇರಿಗಳಿಗೆ ಸಹ ಪ್ರಶಸ್ತಿ ನೀಡಲಾಗುವುದು. ಸಮಾರಂಭದಲ್ಲಿ ಪಾಲ್ಗೊಳ್ಳುವ ಪ್ರತಿಯೊಬ್ಬರೂ ಖಾದಿ ಬಟ್ಟೆಯನ್ನು ಧರಿಸಿಕೊಂಡು ಬರಬೇಕು. ಈ ಬಗ್ಗೆ ಅಧಿಕಾರಿಗಳು ತಮ್ಮ ಕಚೇರಿಯ ಸಿಬ್ಬಂದಿಗಳಿಗೆ ಸೂಕ್ತ ಮಾಹಿತಿ ನೀಡಬೇಕು. ಕಾರ್ಯಕ್ರಮದಲ್ಲಿ ಜಿಲ್ಲೆಯ ಎಲ್ಲಾ ತಾಲ್ಲೂಕಿನಿಂದ ಸರ್ಕಾರಿ ನೌಕರರು ಆಗಮಿಸುವಂತೆ ಕ್ರಮವಹಿಸಿ. ಕಾರ್ಯಕ್ರಮ ಆಯೋಜನೆ ಕುರಿತು ಸಂಬಂಧಿಸಿದ ಅಧಿಕಾರಿಗಳಿಗೆ ನೀಡಲಾದ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ಅಪರ ಜಿಲ್ಲಾಧಿಕಾರಿಗಳಾದ ಸಿದ್ರಾಮೇಶ್ವರ ಅವರು ಮಾತನಾಡಿ, ರಾಜ್ಯ ಸರ್ಕಾರದ ಅಧಿಕಾರಿ, ಕರ್ನಾಟಕ ಸರ್ಕಾರದ ಸರ್ವೋತ್ತಮ ಸೇವಾ ಪ್ರಶಸ್ತಿಗೆ ಅರ್ಹರಾಗಲು ಸರ್ಕಾರಿ ನೌಕರರು ಪರೀಕ್ಷಾರ್ಥ ಅವಧಿ ಸೇರಿ ಕನಿಷ್ಠ 3 ವರ್ಷಗಳ ಸೇವೆ ಪೂರೈಸಿರಬೇಕು. ನೌಕರರು ಅತ್ಯುತ್ತಮ ಕಾರ್ಯಕ್ಷಮತೆ, ನವೀನ ಆಲೋಚನೆ, ಭ್ರಷ್ಟಾಚಾರ ಮುಕ್ತ ಸೇವೆ, ಸಾರ್ವಜನಿಕ ಸ್ನೇಹಿ ನಡವಳಿಕೆ ಮತ್ತು ನೈಸರ್ಗಿಕ ವಿಕೋಪಗಳ ಸಂದರ್ಭದಲ್ಲಿ ಅಸಾಧಾರಣ ಕಾರ್ಯನಿರ್ವಹಣೆ ಮಾಡಿರಬೇಕು. ಅರ್ಜಿ ಸಲ್ಲಿಸುವವರ ವಿರುದ್ಧ ಯಾವುದೇ ಇಲಾಖಾ ವಿಚಾರಣೆ ಅಥವಾ ಕ್ರಿಮಿನಲ್ ಪ್ರಕರಣಗಳು ಇರಬಾರದು. ಈಗಾಗಲೇ ಈ ಪ್ರಶಸ್ತಿ ಪಡೆದವರು ಮರು-ಅರ್ಜಿ ಸಲ್ಲಿಸಲು ಅರ್ಹರಲ್ಲ ಎಂದರು.

ರಾಜ್ಯ ಸರ್ಕಾರಿ ನೌಕರರ ಸಂಘದ ಉಪಾಧ್ಯಕ್ಷರು ಆಗಿರುವ ಕೊಪ್ಪಳ ಜಿಲ್ಲಾ ಅಧ್ಯಕ್ಷರಾದ ನಾಗರಾಜ ಜುಮ್ಮನ್ನವರ್ ಅವರು ಮಾತನಾಡಿ, ಸರ್ಕಾರಿ ನೌಕರರ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲು ಕ.ರಾ.ಸ ನೌಕರರ ಸಂಘವು ಉದ್ದೇಶಿಸಿದೆ. ನೌಕರರು ಹೆಚ್ಚಿನ ಪ್ರಮಾಣದಲ್ಲಿ ಜಿಲ್ಲಾಡಳಿತ ಭವನದಲ್ಲಿರುವುದರಿಂದ ಸರ್ಕಾರಿ ನೌಕರರ ದಿನಾಚರಣೆ ಕಾರ್ಯವನ್ನು ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ನಲ್ಲಿ ಆಯೋಜಿಸಬೇಕು. ಜಿಲ್ಲಾ ಮಟ್ಟದ ಕಾರ್ಯಕ್ರಮ ಇದಾಗಿರುವುದರಿಂದ, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಎಲ್ಲಾ ನೌಕರ ಮಿತ್ರರು ಭಾಗವಹಿಸಿ, ಕಾರ್ಯಕ್ರಮವನ್ನು ಯಶಸ್ವಿಯಾಗಿಸಲು ಎಲ್ಲಾ ಅಧಿಕಾರಿ, ಸಿಬ್ಬಂದಿ ಹಾಗೂ ಸರ್ಕಾರಿ ನೌಕರರ ಸಹಕಾರ ಅಗತ್ಯವಾಗಿದೆ ಎಂದರು.

ಸಭೆಯಲ್ಲಿ ಸಹಾಯಕ ಆಯುಕ್ತರಾದ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಆರ್.ಹೇಮಂತ ಕುಮಾರ್, ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿಗಳಾದ ಡಿ.ಮಂಜುನಾಥ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ಮಂಜುನಾಥ ಗುಂಡೂರು, ಜಂಟಿ ಕೃಷಿ ನಿರ್ದೇಶಕರಾದ ಜಿ.ಡಿ ಕೃಷ್ಣಮೂರ್ತಿ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರಾದ ಅಜ್ಜಪ್ಪ ಸೋಗಲದ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಾದ ಡಾ. ಟಿ.ಲಿಂಗರಾಜು, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕರಾದ ಜಗದೀಶ, ಪಶು ಇಲಾಖೆ ಉಪನಿರ್ದೇಶಕರಾದ ಡಾ. ಪಿ.ಎಂ ಮಲ್ಲಯ್ಯ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ವಿಠ್ಠಲ ಜಾಬಗೌಡ, ಸೇರಿದಂತೆ ರಾಜ್ಯ ಸರ್ಕಾರಿ ನೌಕರರ ಸಂಘದ ಕೊಪ್ಪಳ ಜಿಲ್ಲಾ ಮತ್ತು ತಾಲ್ಲೂಕು ಘಟಕಗಳ ಪದಾಧಿಗಾರಿಗಳು ಹಾಗೂ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಶಂಕರಾಚಾರ್ಯರ ಕೊಡುಗೆ ಅನನ್ಯ



ಕೊಪ್ಪಳ ಏ.22-

ದೇಶಕ್ಕೆ ಶಂಕರಾಚಾರ್ಯರ ಕೊಡುಗೆ ಅವರ ತತ್ವಗಳು ಇಂದಿನ ಸಮಾಜಕ್ಕೆ ದಾರಿದೀಪವಾಗಿವೆ ಎಂದು ಕೊಪ್ಪಳ ವಿಧಾನ ಸಭೆಯ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ ಅವರು ಹೇಳಿದರು.

ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಕೊಪ್ಪಳ ಇವರ ಸಂಯುಕ್ತಾಶ್ರಯದಲ್ಲಿ ಏಪ್ರಿಲ್ 21 ರಂದು ಕೊಪ್ಪಳ ಕೋಟೆ ಹತ್ತಿರದ ಶ್ರೀ ಶಂಕರ ಸಾಂಸ್ಕೃತಿಕ ಭವನ ಹಮ್ಮಿಕೊಂಡಿದ ಶ್ರೀ ಶಂಕರಾಚಾರ್ಯ ಜಯಂತಿ ಕಾರ್ಯಕ್ರಮವನ್ನು ಅದ್ವೈತ ಸಿದ್ಧಾಂತದ ಪ್ರತಿಪಾದಕರು ಹಾಗೂ ಜಗದ್ಗುರುಗಳಾದ ಶ್ರೀ ಶಂಕರಾಚಾರ್ಯರ ಭಾವಚಿತ್ರಕ್ಕೆ ಅತ್ಯಂತ ಶ್ರದ್ಧಾ-ಭಕ್ತಿಯಿಂದ ಪುಷ್ಪ ನಮನ ಸಲ್ಲಿಸಿ ಉದ್ಘಾಟಿಸಿ ಅವರು ಮಾತನಾಡಿದರು.

ಆದಿ ಶಂಕರಾಚಾರ್ಯರು ಭಾರತೀಯ ಸಂಸ್ಕೃತಿಗೆ ನೀಡಿದ ಕೊಡುಗೆ ಅನನ್ಯ. ಅವರ ಅದ್ವೈತ ತತ್ವವು ಇಂದಿಗೂ ಮಾನವ ಜೀವನಕ್ಕೆ ದಾರಿ ತೋರಿಸುತ್ತಿದೆ. ಯುವಜನತೆಗೆ ಶಂಕರಾಚಾರ್ಯರ ಆದರ್ಶಗಳನ್ನು ತಿಳಿಸುವುದು ಅಗತ್ಯವಾಗಿದ್ದು, ಈ ಹಿನ್ನೆಲೆಯಲ್ಲಿ ಇಂತಹ ಮಹನೀಯರ ಜಯಂತಿಯನ್ನು ಸರ್ಕಾರಿ ಕಾರ್ಯಕ್ರಮವನ್ನಾಗಿ ಆಚರಿಸುವ ಮೂಲಕ ಅವರ ಬಗ್ಗೆ ತಿಳಿಸುವ ಕೆಲಸ ಆಗುತ್ತಿದೆ ಎಂದು ಅವರು ಹೇಳಿದರು.

ವಿಧಾನ ಪರಿಷತ್ ಸದಸ್ಯರಾದ ಹೇಮಲತಾ ನಾಯಕ ಅವರು ಮಾತನಾಡಿ, ಭಾರತೀಯ ದಾರ್ಶನಿಕ ಪರಂಪರೆಯ ಮಹಾನ್ ತತ್ವಜ್ಞರಾದ ಆದಿ ಶಂಕರಾಚಾರ್ಯ ಅದ್ವೈತ ವೇದಾಂತವು ಜಗತ್ತಿನ ಏಕತ್ವವನ್ನು ಸಾರುತ್ತದೆ.

ಇದು ಸಮಾಜದಲ್ಲಿ ಸೌಹಾರ್ದತೆ ಮತ್ತು ಸಹೋದರತ್ವವನ್ನು ಬೆಳೆಸಲು ನೆರವಾಗುತ್ತದೆ. ''ಬ್ರಹ್ಮವೇ ಸತ್ಯ, ಜಗತ್ತು ಮಿಥ್ಯಾ'' ಎಂಬ ಶಂಕರಾಚಾರ್ಯರ ತತ್ವ ಮಾನವನ ಆತ್ಮಜ್ಞಾನಕ್ಕೆ ದಾರಿ ತೋರಿಸುತ್ತದೆ. ಶಂಕರಾಚಾರ್ಯರು ಅದ್ವೈತ ವೇದಾಂತವನ್ನು ಕಾಲನಡಿಗೆ ಮೂಲಕ ಜಗತ್ತಿಗೆ ಸಾರಿದ್ದಾರೆ ಎಂದು ತಿಳಿಸಿದರು.

ಧಾರವಾಡದ ನಿವೃತ್ತಿ ಪ್ರಾಚಾರ್ಯರಾದ ಡಾ.ವಿದ್ಯಾನಾಥ ಶಾಸ್ತ್ರೀಗಳು ಶಂಕರಾಚಾರ್ಯರ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಈ ಸಂದರ್ಭದಲ್ಲಿ ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪ್ರಸನ್ನ ವೀರಣ್ಣ ಗಡಾದ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಕರ್ಣಕುಮಾರ, ಶ್ರೀ ಶಂಕರ ಸೇವಾ ಸಮಿತಿಯ ಅಧ್ಯಕ್ಷರಾದ ಡಿ.ವಿ.ಜೋಶಿ, ಉಪಾಧ್ಯಕ್ಷರಾದ ಅಶೋಕ ಪದಕಿ, ರಮೇಶ್ ಪದಕಿ, ಕಾರ್ಯದರ್ಶಿಯಾದ ರವಿ ಪುರೋಹಿತ, ಸಮಾಜದ ಮುಖಂಡರಾದ ವಿಜಯಕುಮಾರ ಪದಕಿ, ವಿಶ್ವನಾಥ ಸಿದ್ಧಾಂತಿ, ನಾಗರಜ ಸಿದ್ಧಾಂತಿ, ಉದಯಕುಮಾರ ಗುಡ್ಡಿ, ಬಿಂದರಾಮು ಪದಕಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

24 ರಂದು ಡಾ. ರಾಜ್‌ಕುಮಾರ್ ಜನ್ಮ ದಿನಾಚರಣೆ: ಕನ್ನಡ ಚಲನಚಿತ್ರ ಗೀತೆಗಳ ಗಾಯನ ಕಾರ್ಯಕ್ರಮ

ಬಳ್ಳಾರಿ,ಏ.22

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಡಾ.ರಾಜ್‌ಕುಮಾರ್ ಜನ್ಮದಿನಾಚರಣೆಯ ಅಂಗವಾಗಿ ಏ.24 ರಂದು ಸಂಜೆ 06 ಗಂಟೆಗೆ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮದಿರದಲ್ಲಿ ಕನ್ನಡ ಚಲನಚಿತ್ರ ಗೀತೆಗಳ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ.

ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ಬಳ್ಳಾರಿ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಅವರು ಕಾರ್ಯಕ್ರಮ ಉದ್ಘಾಟಿಸುವರು.

ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಅಧ್ಯಕ್ಷತೆ ವಹಿಸುವರು.

ಲೋಕಸಭೆ ಸಂಸದರಾದ ಈ.ತುಕಾರಾಮ್, ಕೆ.ರಾಜಶೇಖರ ಬಸವರಾಜ ಹಿಟ್ನಾಳ್, ರಾಜ್ಯಸಭೆ ಸಂಸದ ಡಾ.ಸೈಯದ್ ನಾಸೀರ್ ಹುಸೇನ್, ಕರ್ನಾಟಕ ರಾಜ್ಯ ಸಹಕಾರ ಕೈಮಗ್ಗ ನೇಕಾರ ಮಹಾಮಂಡಳಿ ನಿಯಮಿತ(ಕಾವೇರಿ ಹ್ಯಾಂಡ್‌ಲೂಮ್ಸ್)ದ ಅಧ್ಯಕ್ಷ ಹಾಗೂ ಕಂಪ್ಲಿ ಶಾಸಕ ಜೆ.ಎನ್ ಗಣೇಶ್, ಡಾ.ಬಾಬು ಜಗಜೀವನ್‌ರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಮುಂಡರಗಿ ನಾಗರಾಜ, ಬಳ್ಳಾರಿ ಗ್ರಾಮೀಣ ಶಾಸಕ ಬಿ.ನಾಗೇಂದ್ರ, ಸಿರುಗುಪ್ಪ ಶಾಸಕ ಬಿ.ಎಂ ನಾಗರಾಜ, ಸಂಡೂರು ಶಾಸಕಿ ಈ.ಅನ್ನಪೂರ್ಣ, ವಿಧಾನಪರಿಷತ್ ಶಾಸಕರಾದ ಡಾ.ಚಂದ್ರಶೇಖರ್ ಬಿ.ಪಾಟೀಲ, ಶಶೀಲ್ ನಮೋಶಿ, ವೈ.ಎಂ.ಸತೀಶ್, ಮಹಾನಗರ ಪಾಲಿಕೆಯ ಮಹಾಪೌರರಾದ ಪಿ.ಗಾದೆಪ್ಪ, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜೆ.ಎಸ್.ಆಂಜನೇಯಲು, ಕರ್ನಾಟಕ ಸ್ಟೇಟ್ ಮಿನಿರಲ್ಸ್ ಕಾರ್ಪೋರೇಷನ್ ಲಿಮಿಟೆಡ್‌ನ ಉಪಾಧ್ಯಕ್ಷ ಹೆಚ್.ಲಕ್ಷ್ಮಣ್, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ ಚಿದಾನಂದಪ್ಪ ವಿವಿಧ ಕನ್ನಡ ಪರ ಸಂಘಟನೆಗಳ ಪದಾಧಿಕಾರಿಗಳು ಸೇರಿದಂತೆ ಇತರರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಪುತ್ಥಳಿಗೆ ಮಾಲಾರ್ಪಣೆ: ಡಾ.ರಾಜ್‌ಕುಮಾರ ಜನ್ಮದಿನಾಚರಣೆಯ ಅಂಗವಾಗಿ ಅಂದು ಬೆಳಿಗ್ಗೆ 09 ಗಂಟೆಗೆ ಡಾ.ರಾಜ್‌ಕುಮಾರ ಉದ್ಯಾನವನದಲ್ಲಿನ ಡಾ.ರಾಜ್ ಕುಮಾರ್ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಗುವುದು.

ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸುಮನ್ ಡಿ.ಪನ್ನೇಕರ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ ಅಪರ ಜಿಲ್ಲಾಧಿಕಾರಿ ಮಹಮ್ಮದ್ ಎನ್.ಝುಬೇರ ಸಹಾಯಕ ಆಯುಕ್ತ ರಾಜೇಶ್ ಹೆಚ್.ಡಿ., ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಬಿ.ವಿ.ತುಕಾರಾಂ ರಾವ್ ಸೇರಿದಂತೆ ಇತರರು ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

ಜಿಲ್ಲಾಡಳಿತದಿಂದ ಬಸವ ಜಯಂತ್ಯುತ್ಸವ; ಬಸವಗೋಷ್ಠಿ ಬಸವಣ್ಣನವರು ಅಕ್ಷರಶಃ ಸಾಂಸ್ಕೃತಿಕ ನಾಯಕ: ಶಾಸಕಿ ಹೇಮಲತಾ ನಾಯಕ

ಕೊಪ್ಪಳ ಏ.22-

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಕನ್ನಡ ಮತ್ತು ಸಾಂಸ್ಕೃತಿಕ ಇಲಾಖೆ ಹಾಗೂ ನಗರಸಭೆ, ಬಸವ ಜಯಂತ್ಯುತ್ಸವ ಸಮಿತಿ ಕೊಪ್ಪಳ ಮತ್ತು ಬಸವಾನುಯಾಯಿ ಸಂಘ ಸಂಸ್ಥೆಗಳ ಸಹಯೋಗದಲ್ಲಿ

ಏಪ್ರೀಲ್ 20ರಂದು ಕರ್ನಾಟಕದ ಸಾಂಸ್ಕೃತಿಕ ನಾಯಕ ಶ್ರೀ ಬಸವೇಶ್ವರ ಜಯಂತ್ಯುತ್ಸವ ಕಾರ್ಯಕ್ರಮ ನಡೆಯಿತು. ಶ್ರೀ ಗವಿಸಿದ್ದೇಶ್ವರ ಮಠದ ಬಯಲ ಆವರಣದಲ್ಲಿ ಇಳಿಹೊತ್ತಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಶಾಸಕರಾದ ಹೇಮಲತಾ ನಾಯಕ ಅವರು ಬಸವ ಪುತ್ಥಳಿಗೆ ಪುಷ್ಪನಮನ ಸಲ್ಲಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಹೇಮಲತಾ ನಾಯಕ, ಬಸವಣ್ಣನವರು ತೆರೆದ ಪುಸ್ತಕ ಇದ್ದಂತೆ. ಬಸವ ಹೇಳಿದ ಹಾದಿಯಲ್ಲಿ ನಾವು ನಡೆಯೋಣ. ಬಸವಣ್ಣನೆಂಬ ಬೆಳಕು ಉದಯಿಸಿದ್ದರಿಂದಲೇ ಈ ಜಗದ ಬದುಕು ಪಾವನವಾಯಿತು ಎಂದು ನಾವೆಲ್ಲರೂ ತಿಳಿಯಬೇಕು. ಅಂತಹ ಮಾನವತವಾದಿ ಬಸವಣ್ಣನವರು ಅಕ್ಷರಶಃ ಸಾಂಸ್ಕೃತಿಕ ನಾಯಕ ಎಂದು ತಿಳಿಸಿದರು. ವೈಚಾರಿಕ ವಿಚಾರಧಾರೆಯ ವಚನಗಳ ಓದುವ ಮೂಲಕ ಯುವಕರು ಧನಾತ್ಮಕ ವಿಚಾರಗಳನ್ನು ಬೆಳೆಸಿಕೊಳ್ಳಬೇಕು ಎಂದರು.



ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಅವರು ಮಾತನಾಡಿ, ಬಸವಣ್ಣನವರ ತತ್ವಗಳು ಇಂದಿಗೂ ಪ್ರಸ್ತುತವಾಗಿವೆ. ನಾವು ಮುಂದಿನ ಪೀಳಿಗೆಗೆ ಬಸವ ವಿಚಾರಗಳನ್ನು ತಿಳಿಸಬೇಕು. ಶರಣರ ಉತ್ತಮ ಸಂದೇಶಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಲು ನಾವೆಲ್ಲರೂ ಪ್ರತಿಜ್ಞೆಗೈಯೋಣ ಎಂದರು.

ಶರಣ ಚಿಂತಕ, ವಿದ್ವಾಂಸ ವಿ.ಎಸ್. ಮಾಳಿ ಹಾಗೂ ಚಿಂತಕಿ ಡಾ.ದಾನಮ್ಮ ಝಳಕಿ ಅವರು ಬಸವಗೋಷ್ಠಿ ನಡೆಸಿದರು. ಬಿಸರಳ್ಳಿ ಶಾಖಾಮಠದ ಶ್ರೀ ಶಿವಶಾಂತವೀರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಸಮಾರಂಭದಲ್ಲಿ ಬಸವರಾಜ ಬಳ್ಳೊಳ್ಳಿ ಅವರು ಪ್ರಾಸ್ತಾವಿಕ ಮಾತನಾಡಿದರು. ಸಮಾರಂಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಕರ್ಣಕುಮಾರ ಮತ್ತು ಬಸವ ಅನುಯಾಯಿಗಳು ಇದ್ದರು.


ಬಸವ ಕಾರುಣ್ಯ ಪುರಸ್ಕಾರ ಪ್ರದಾನ:★ ಉತ್ತಮ ಸಾಧಕರಾದ, ದಿವ್ಯಾಂಗ ಮಕ್ಕಳೊಂದಿಗೆ ಬದುಕುತ್ತ, ಮಕ್ಕಳ ಪಾಲನೆ ಪೋಷಣೆ ಮಾಡಿ ಸುಸ್ಥಿರ ಬದುಕು ಕಟ್ಟಿಕೊಂಡ ಶ್ರೀ ಯಲ್ಲಮ್ಮ ಬೆಳ್ಳಟ್ಟಿ ಅವರಿಗೆ, ಕೊಪ್ಪಳ ಇತಿಹಾಸದಲ್ಲಿ ಪಿಯುಸಿಯಲ್ಲಿ ಅತ್ಯುತ್ತಮ ಶ್ರೇಣಿ ತಂದುಕೊಟ್ಟ ಕೊಟ್ಟೂರ ಇಂದು ಪಿಯು ಕಾಲೇಜಿನ ವಿದ್ಯಾರ್ಥಿನಿ, 600ಕ್ಕೆ 598 ಅಂಕ ಗಳಿಸಿ ಸಾಧನೆ ತೋರಿದ ಸಂಗೀತ ಪಾಟೀಲ ಅವರಿಗೆ, ವೃತ್ತಿಯಲ್ಲಿ ಪಶು ವೈದ್ಯರಾದ ಜಾನುವಾರು ಸಂರಕ್ಷಕರಾದ ವಿಕಲಚೇತನ ಮಕ್ಕಳನ್ನು ಗುರುತಿಸಿ ಅವರಿಗೆ ಸಹಾಯ ಸೌಕರ್ಯ ಮಾಡುತ್ತಿರುವ, ಪರಿಸರ, ನಾಡು ನುಡಿಯ ಲೇಖನ ಬರೆಯುವ ಡಾ.ಜಿ ಎಸ್ ಅಶ್ವತ್ಥಕುಮಾರ ಅವರಿಗೆ ಸಮಾರಂಭದಲ್ಲಿ ಬಸವ ಕಾರುಣ್ಯ ಪುರಸ್ಕಾರ 2026 ನೀಡಿ ಗೌರವಿಸಲಾಯಿತು. ಗವಿಸಿದ್ದಪ್ಪ ಕೊಪ್ಪಳ ಅವರು ಕಾರ್ಯಕ್ರಮ ನಡೆಸಿಕೊಟ್ಟರು.

ಲೇಖಕ ಮಹೇಶ ಬಳ್ಳಾರಿ ಹಾಗೂ ವೀರೇಶ ಕೊಪ್ಪಳ ಅವರು ನಿರೂಪಿಸಿದರು.

ನಿಮ್ಮೂರು ಸುದ್ದಿ

ಸಂಪಾದಕೀಯ

ಬಂಗಾಳದಲ್ಲಿ 91 ಲಕ್ಷ ಮತದಾರರ ಹರಣ; ಪ್ರಜಾಪ್ರಭುತ್ವದ ಕಗ್ಗೊಲೆ



ಪಶ್ಚಿಮ ಬಂಗಾಳದ ಈ ಬೃಹತ್ ಮತದಾರರ ಕಡಿತ ಕೇವಲ ಒಂದು ತಾಂತ್ರಿಕ ಪ್ರಮಾದವಲ್ಲ; ಬದಲಿಗೆ, ಇದು ಪ್ರಜಾಪ್ರಭುತ್ವದ ಅಡಿಪಾಯದ ಮೇಲೆಯೇ ನಡೆದಿರುವ ಅತ್ಯಂತ ಅಪಾಯಕಾರಿ ಹಾಗೂ ವ್ಯವಸ್ಥಿತ ದಾಳಿ. ಕೃತಕ ಬುದ್ಧಿಮತ್ತೆಯೆಂಬ ಯಂತ್ರದ ನೆಪವೊಡ್ಡಿ, ಕೇವಲ ರಾಜಕೀಯ ಲಾಭಕ್ಕಾಗಿ ಲಕ್ಷಾಂತರ ಜನರ ಸಾಂವಿಧಾನಿಕ ಹಕ್ಕನ್ನು ಕಸಿದುಕೊಳ್ಳುವ ಈ ನಡೆಯು ಭವಿಷ್ಯದ ಸರ್ವಾಧಿಕಾರದ ಸ್ಪಷ್ಟ ಮುನ್ಸೂಚನೆಯಾಗಿದೆ

ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣಾ ಕಣ ರಂಗೇರುತ್ತಿರುವಾಗಲೇ, ಪ್ರಜಾಪ್ರಭುತ್ವದ ಅಡಿಪಾಯವನ್ನೇ ನಡುಗಿಸುವಂತಹ ಆಘಾತಕಾರಿ ಬೆಳವಣಿಗೆಯೊಂದು ನಡೆದಿದೆ. ವಿಶೇಷ ತೀವ್ರ ಪರಿಷ್ಕರಣೆ () ಎಂಬ ವಿವಾದಾತ್ಮಕ ಪ್ರಕ್ರಿಯೆಯ ಮೂಲಕ ರಾಜ್ಯದಾದ್ಯಂತ ಬರೋಬ್ಬರಿ 91 ಲಕ್ಷಕ್ಕೂ ಹೆಚ್ಚು ಜನರ ಹೆಸರುಗಳನ್ನು ದಿಢೀರನೆ ಮತದಾರರ ಪಟ್ಟಿಯಿಂದ ಕಡಿತಗೊಳಿಸಲಾಗಿದೆ. ಇದು ಕೇವಲ ಒಂದು ಸಾಮಾನ್ಯ ಆಡಳಿತಾತ್ಮಕ ಪ್ರಮಾದವೋ ಅಥವಾ ವ್ಯವಸ್ಥಿತವಾಗಿ ಹೆಣೆದ ರಾಜಕೀಯ ಷಡ್ಯಂತ್ರವೋ ಎಂಬ ಗಂಭೀರ ಪ್ರಶ್ನೆ ಈಗ ದೇಶದ ಮುಂದಿದೆ. ಚುನಾವಣೆಯ ಹೊಸ್ತಿಲಲ್ಲಿ, ಯಾವುದೇ ಮುನ್ಸೂಚನೆ ನೀಡದೆ ನಡೆದಿರುವ ಈ ಬೃಹತ್ ಕಡಿತವು, ಲಕ್ಷಾಂತರ ನೈಜ ಪ್ರಜೆಗಳ ಮತದಾನದ ಹಕ್ಕನ್ನೇ ಕಸಿದುಕೊಳ್ಳುವ ಸ್ಪಷ್ಟ ಹುನ್ನಾರದಂತೆ ಮೇಲ್ನೋಟಕ್ಕೆ ಗೋಚರಿಸುತ್ತಿದೆ.

ಈ 91 ಲಕ್ಷ ಎಂಬ ಕಡಿತಗೊಂಡ ಸಂಖ್ಯೆ ಸಣ್ಣದಲ್ಲ; ಇದು ಪಶ್ಚಿಮ ಬಂಗಾಳದ ಒಟ್ಟು ಮತದಾರರ ಬರೋಬ್ಬರಿ ಶೇಕಡಾ 10ರಷ್ಟಿದೆ. (ಜಮ್ಮು ಕಾಶ್ಮೀರಕ್ಕಿಂತ ಹೆಚ್ಚು ಜನಸಂಖ್ಯೆ; ರುವಾಂಡಾ, ಗ್ವಾಟೆಮಾಲಾ,ಕಾಂಬೋಡಿಯಾ, ಗ್ರೀಸ್ ದೇಶಗಳಲ್ಲೂ ಇಷ್ಟೇ ಜನಸಂಖ್ಯೆಯಿದ್ದಾರೆ) ಮೃತಪಟ್ಟವರು ಹಾಗೂ ನಕಲಿ ಮತದಾರರನ್ನು ಪಟ್ಟಿಯಿಂದ ಕಟ್ಟುನಿಟ್ಟಾಗಿ ತೆಗೆದುಹಾಕಲಾಗಿದೆ ಎಂದು ಚುನಾವಣಾ ಆಯೋಗವು ತಾಂತ್ರಿಕ ಕಾರಣಗಳನ್ನು ನೀಡುತ್ತಾ ತನ್ನ ನಡೆಯನ್ನು ಸಮರ್ಥಿಸಿಕೊಳ್ಳುತ್ತಿದೆ. ಆದರೆ, ವಾಸ್ತವದ ನೆಲೆಗಟ್ಟಿನಲ್ಲಿ ನೋಡಿದಾಗ, ದಶಕಗಳಿಂದಲೂ ಇದೇ ನೆಲದಲ್ಲಿ ಬದುಕುತ್ತಿರುವ ಲಕ್ಷಾಂತರ ಅಪ್ಪಟ ಭಾರತೀಯ ಪ್ರಜೆಗಳ, ನೈಜ ಮತದಾರರ ಹೆಸರುಗಳು ಏಕಾಏಕಿ ಪಟ್ಟಿಯಿಂದ ನಾಪತ್ತೆಯಾಗಿವೆ. ತಮ್ಮ ದೈನಂದಿನ ಬದುಕಿನ ಬವಣೆಯಲ್ಲಿರುವ ಜನಸಾಮಾನ್ಯರು, ಇದೀಗ ತಮ್ಮದೇ ದೇಶದಲ್ಲಿ ತಾವು ಪ್ರಜೆಗಳು ಎಂದು ಸಾಬೀತುಪಡಿಸಲು ಸರ್ಕಾರಿ ಕಚೇರಿಗಳ ಮೆಟ್ಟಿಲೇರುವಂತಹ ದಯನೀಯ ಪರಿಸ್ಥಿತಿ ನಿರ್ಮಾಣವಾಗಿದೆ.

ತಮ್ಮ ಹೆಸರುಗಳು ಕಣ್ಮರೆಯಾದದ್ದನ್ನು ಕಂಡು ಆತಂಕಗೊಂಡ ಸುಮಾರು 27 ಲಕ್ಷ ಜನರು, ತಮ್ಮ ಬಳಿಯಿರುವ ಸೂಕ್ತ ದಾಖಲೆಗಳ ಸಮೇತ ಮೇಲ್ಮನವಿ ಸಲ್ಲಿಸಿದ್ದಾರೆ. ಆದರೆ, ಅಷ್ಟೆಲ್ಲಾ ಅಧಿಕೃತ ಸಾಕ್ಷ್ಯಾಧಾರಗಳನ್ನು ಒದಗಿಸಿದರೂ ಅವರ ಹೆಸರುಗಳನ್ನು ಮರುಸೇರ್ಪಡೆ ಮಾಡಲು ಅಧಿಕಾರಿಗಳು ಹಿಂದೇಟು ಹಾಕುತ್ತಿದ್ದಾರೆ. ಒಮ್ಮೆ ಪಟ್ಟಿಯಿಂದ ಹೆಸರು ಅಳಿಸಿಹೋದರೆ ಅದನ್ನು ಮರಳಿ ಸೇರಿಸುವ ಪ್ರಕ್ರಿಯೆಯನ್ನು ಉದ್ದೇಶಪೂರ್ವಕವಾಗಿಯೇ ಅತ್ಯಂತ ಕಠಿಣಗೊಳಿಸಲಾಗಿದೆ. ಆಡಳಿತಶಾಹಿಯ ಈ ಮೊಂಡುತನವು, ಚುನಾವಣಾ ಆಯೋಗದ ಪಾರದರ್ಶಕತೆ ಮತ್ತು ನಿಷ್ಪಕ್ಷಪಾತ ಕಾರ್ಯವೈಖರಿಯ ಮೇಲೆ ಗಂಭೀರವಾದ ಅನುಮಾನಗಳನ್ನು ಹುಟ್ಟುಹಾಕಿದೆ.

ಈ ಎಸ್‌ಐಆರ್ ಕಡಿತ ಪ್ರಕ್ರಿಯೆಯನ್ನು ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಸರ್ಕಾರವು ಬಲವಾಗಿ ಸಮರ್ಥಿಸಿಕೊಳ್ಳುತ್ತಿದೆ. ಬಾಂಗ್ಲಾದೇಶದಿಂದ ಗಡಿ ದಾಟಿ ಅಕ್ರಮವಾಗಿ ನುಸುಳಿರುವವರನ್ನು ಪತ್ತೆಹಚ್ಚಲು ಮತ್ತು ತಡೆಯಲು ಈ ಕಠಿಣ ಕ್ರಮ ಅನಿವಾರ್ಯ ಎಂದು ಅದು ವಾದಿಸುತ್ತಿದೆ. ಆದರೆ, ಅಕ್ರಮ ವಲಸಿಗರನ್ನು ತಡೆಯುವ ಈ ನೆಪದಲ್ಲಿ, ಮುಂಬರುವ ಚುನಾವಣೆಯಲ್ಲಿ ತಮಗೆ ಮತ ಹಾಕುವುದಿಲ್ಲ ಎಂದು ಭಾವಿಸಲಾದ ನಿರ್ದಿಷ್ಟ ವರ್ಗದ ಜನರನ್ನೇ ಗುರಿಯಾಗಿಸಿ ಈ ಅಳಿಸುವಿಕೆ ನಡೆದಿದೆ ಎಂಬ ಟೀಕೆಗಳು ರಾಜಕೀಯ ವಲಯದಲ್ಲಿ ವ್ಯಾಪಕವಾಗಿ ಕೇಳಿಬರುತ್ತಿವೆ.

ಕಳೆದ 15 ವರ್ಷಗಳಿಂದ ಪಶ್ಚಿಮ ಬಂಗಾಳದಲ್ಲಿ ನಿರಂತರವಾಗಿ ಆಡಳಿತ ನಡೆಸುತ್ತಿರುವ ಮಮತಾ ಬ್ಯಾನರ್ಜಿ ಅವರ ಟಿಎಂಸಿ ಪಕ್ಷವನ್ನು ಶತಾಯಗತಾಯ ಸೋಲಿಸಲು ಬಿಜೆಪಿ ತೀವ್ರ ಯತ್ನ ನಡೆಸುತ್ತಿದೆ. ನೇರ ಚುನಾವಣಾ ಅಖಾಡದಲ್ಲಿ ಜನರ ಮನವೊಲಿಸಿ ಗೆಲ್ಲುವುದು ಕಷ್ಟ ಎಂಬುದು ಅರಿವಾದಾಗ, ಆಡಳಿತ ಯಂತ್ರವನ್ನು ತಮಗೆ ಬೇಕಾದಂತೆ ದುರ್ಬಳಕೆ ಮಾಡಿಕೊಂಡು, ವಿರೋಧ ಪಕ್ಷದ ಭದ್ರ ಮತಬ್ಯಾಂಕ್‌ಗೆ ಕನ್ನ ಹಾಕಲು ಬಿಜೆಪಿ ಈ ತಂತ್ರ ರೂಪಿಸಿದೆ ಎಂಬುದು ರಾಜಕೀಯ ವಿಶ್ಲೇಷಕರ ಮತ್ತು ವಿರೋಧ ಪಕ್ಷಗಳ ಸ್ಪಷ್ಟ ಆರೋಪವಾಗಿದೆ.

ಈ ವಿವಾದಾತ್ಮಕ ಉದ್ದೇಶಕ್ಕಾಗಿ ಕೃತಕ ಬುದ್ಧಿಮತ್ತೆ () ತಂತ್ರಜ್ಞಾನವನ್ನು ಒಂದು ಪ್ರಬಲ ಅಸ್ತ್ರವಾಗಿ ಬಳಸಿಕೊಳ್ಳಲಾಗಿದೆ. ಮತದಾರರ ದಾಖಲೆಗಳಲ್ಲಿರುವ ದೋಷಗಳನ್ನು ಹುಡುಕಲು ಎಐ ತಂತ್ರಾಂಶವನ್ನು ಬಳಸಿದ್ದು ಬಹುದೊಡ್ಡ ಎಡವಟ್ಟಿಗೆ ಕಾರಣವಾಗಿದೆ. ಯಾವುದೇ ರೀತಿಯ ಮಾನವ ಪರಿಶೀಲನೆ ಇಲ್ಲದೆ, ಕೇವಲ ಯಂತ್ರದ ಕುರುಡು ನಿರ್ಧಾರಗಳಿಗೆ ಲಕ್ಷಾಂತರ ಜನರ ಪೌರತ್ವವನ್ನು ಬಲಿಕೊಟ್ಟಿರುವುದು ಆಡಳಿತದ ತೀವ್ರ ನಿರ್ಲಕ್ಷ್ಯ ಮತ್ತು ಬೇಜವಾಬ್ದಾರಿತನವನ್ನು ಎತ್ತಿ ತೋರಿಸುತ್ತದೆ.

ಬಂಗಾಳಿ ಭಾಷೆಯ ಸಾಂಸ್ಕೃತಿಕ ಸೂಕ್ಷ್ಮತೆಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಈ ಎಐ ತಂತ್ರಾಂಶ ಸಂಪೂರ್ಣವಾಗಿ ವಿಫಲವಾಗಿದೆ. ಬಂಗಾಳಿ ಹೆಸರುಗಳನ್ನು ಇಂಗ್ಲಿಷ್‌ನಲ್ಲಿ ಬರೆಯುವಾಗ ಕಾಗುಣಿತಗಳು ಸಹಜವಾಗಿಯೇ ಬದಲಾಗುತ್ತವೆ. ಉದಾಹರಣೆಗೆ, ತಲೆಮಾರುಗಳಿಂದ ಬಂದ ಉಪನಾಮಗಳ ಬದಲಾವಣೆ ಅಥವಾ ಕುಟುಂಬದ ಸದಸ್ಯರ ದಾಖಲೆಗಳಲ್ಲಿರುವ ಸಣ್ಣಪುಟ್ಟ ಅಕ್ಷರ ದೋಷಗಳನ್ನು ಎಐ ''ನಕಲಿ'' ಅಥವಾ ''ಅಕ್ರಮ'' ಎಂದು ತಪ್ಪಾಗಿ ಗ್ರಹಿಸಿದೆ. ಪರಿಣಾಮವಾಗಿ, ನೈಜ ಪ್ರಜೆಗಳ ಹೆಸರುಗಳನ್ನು ಸಾರಾಸಗಟಾಗಿ ಕಿತ್ತುಹಾಕಿದೆ.

ಈ ತಾಂತ್ರಿಕ ಅವ್ಯವಸ್ಥೆಯ ತೀವ್ರತೆ ಎಷ್ಟಿದೆ ಎಂದರೆ, ನೊಬೆಲ್ ಪ್ರಶಸ್ತಿ ಪುರಸ್ಕೃತ, ಖ್ಯಾತ ಅರ್ಥಶಾಸ್ತ್ರಜ್ಞ ಅಮರ್ತ್ಯ ಸೇನ್ ಅವರ ಹೆಸರಿಗೂ ಕುತ್ತು ಬಂದಿತ್ತು! ದೇಶದ ಹೆಮ್ಮೆಯಂತಿರುವ ಅಂತಹ ಗಣ್ಯರ ದಾಖಲೆಗಳನ್ನೇ ಈ ಎಐ ತಂತ್ರಾಂಶ ಶಂಕಿಸಿ, ಅವರನ್ನು ಅನುಮಾನದ ದೃಷ್ಟಿಯಿಂದ ನೋಡಿದರೆ, ಇನ್ನು ಹಳ್ಳಿಗಳಲ್ಲಿರುವ ಬಡ, ಅನಕ್ಷರಸ್ಥ ಮತದಾರರ ಪಾಡೇನು ಎಂಬುದನ್ನು ಊಹಿಸಿದರೆ ಗಾಬರಿಯಾಗುತ್ತದೆ. ಹಕ್ಕುಗಳನ್ನು ಕೇಳಲು ಧ್ವನಿಯೇ ಇಲ್ಲದ ಮುಗ್ಧರು ಇಂದು ವ್ಯವಸ್ಥೆಯ ಪಾಲಿಗೆ ಬಲಿಯಾಗುತ್ತಿದ್ದಾರೆ.

ಇದೊಂದು ''ರಕ್ತರಹಿತ ರಾಜಕೀಯ ನರಮೇಧ'' ಎಂದು ಹಲವು ಸಾಮಾಜಿಕ ಚಿಂತಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕಣ್ಮರೆಯಾಗಿರುವ 91 ಲಕ್ಷ ಹೆಸರುಗಳಲ್ಲಿ ಮುಸ್ಲಿಮರು ಹಾಗೂ ಇತರ ಧಾರ್ಮಿಕ ಅಲ್ಪಸಂಖ್ಯಾತರ ಸಂಖ್ಯೆಯೇ ಅತಿ ಹೆಚ್ಚಿದೆ ಎಂಬುದು ತೀವ್ರ ಆತಂಕಕಾರಿ ವಿಷಯವಾಗಿದೆ. ಬಿಜೆಪಿಯ ಧ್ರುವೀಕರಣ ರಾಜಕಾರಣಕ್ಕೆ ಅಡ್ಡಿಯಾಗಿರುವ ಈ ನಿರ್ದಿಷ್ಟ ಸಮುದಾಯಗಳನ್ನು ಯೋಜನಾಬದ್ಧವಾಗಿ ಚುನಾವಣಾ ಪ್ರಕ್ರಿಯೆಯಿಂದಲೇ ಶಾಶ್ವತವಾಗಿ ಹೊರಗಿಡುವ ವ್ಯವಸ್ಥಿತ ಸಂಚು ಇದಾಗಿದೆ ಎಂಬುದು ಲಭ್ಯವಿರುವ ಅಂಕಿ-ಅಂಶಗಳಿಂದ ಸಾಬೀತಾಗುತ್ತಿದೆ.

ಈ ಕಟು ಅನ್ಯಾಯದ ಜೀವಂತ ಉದಾಹರಣೆಯಾಗಿ ಮುರ್ಷಿದಾಬಾದ್‌ನ ಶೇರ್ಪುರ್ ಗ್ರಾಮದ 36 ವರ್ಷದ ಜಬೇರ್ ಅಲಿ ನಿಲ್ಲುತ್ತಾರೆ. ಸ್ವತಃ ಇದೇ ಮತದಾರರ ಪಟ್ಟಿ ಪರಿಷ್ಕರಣೆಯ ಸರ್ಕಾರಿ ಕೆಲಸದಲ್ಲಿ ತೊಡಗಿದ್ದ ಜಬೇರ್ ಅವರ ಹೆಸರನ್ನೇ ಪಟ್ಟಿಯಿಂದ ಅಳಿಸಲಾಗಿದೆ! ''ಇಲ್ಲಿ ಕೈಬಿಡಲಾದ ಬಹುತೇಕ ಹೆಸರುಗಳು ಮುಸ್ಲಿಮರಿಗೆ ಸೇರಿವೆ'' ಎಂದು ಖುದ್ದು ಆ ಅಧಿಕಾರಿಯೇ ಅಸಹಾಯಕತೆಯಿಂದ ಅಳಲು ತೋಡಿಕೊಂಡಿದ್ದಾರೆ. ಒಬ್ಬ ಸರ್ಕಾರಿ ನೌಕರನಿಗೇ ಈ ಗತಿಯಾದರೆ, ಸಾಮಾನ್ಯನ ಧ್ವನಿಗೆ ಬೆಲೆಯೆಲ್ಲಿದೆ ಎಂಬುದು ವ್ಯವಸ್ಥೆಯೊಳಗಿನ ತಾರತಮ್ಯವನ್ನು ಸಂಪೂರ್ಣವಾಗಿ ಬೆತ್ತಲೆ ಮಾಡಿದೆ.

ಪಶ್ಚಿಮ ಬಂಗಾಳದ ಈ ಬೃಹತ್ ಮತದಾರರ ಕಡಿತ ಕೇವಲ ಒಂದು ತಾಂತ್ರಿಕ ಪ್ರಮಾದವಲ್ಲ; ಬದಲಿಗೆ, ಇದು ಪ್ರಜಾಪ್ರಭುತ್ವದ ಅಡಿಪಾಯದ ಮೇಲೆಯೇ ನಡೆದಿರುವ ಅತ್ಯಂತ ಅಪಾಯಕಾರಿ ಹಾಗೂ ವ್ಯವಸ್ಥಿತ ದಾಳಿ. ಕೃತಕ ಬುದ್ಧಿಮತ್ತೆಯೆಂಬ ಯಂತ್ರದ ನೆಪವೊಡ್ಡಿ, ಕೇವಲ ರಾಜಕೀಯ ಲಾಭಕ್ಕಾಗಿ ಲಕ್ಷಾಂತರ ಜನರ ಸಾಂವಿಧಾನಿಕ ಹಕ್ಕನ್ನು ಕಸಿದುಕೊಳ್ಳುವ ಈ ನಡೆಯು ಭವಿಷ್ಯದ ಸರ್ವಾಧಿಕಾರದ ಸ್ಪಷ್ಟ ಮುನ್ಸೂಚನೆಯಾಗಿದೆ. ತಕ್ಷಣವೇ ಚುನಾವಣಾ ಆಯೋಗವು ತನ್ನ ಸಾಂವಿಧಾನಿಕ ಹೊಣೆಗಾರಿಕೆಯನ್ನು ಅರಿತು, ನಿಷ್ಪಕ್ಷಪಾತವಾಗಿ ಮಧ್ಯಪ್ರವೇಶಿಸಬೇಕು. ಕಳೆದುಹೋದ ಪ್ರತಿಯೊಂದು ನೈಜ ಮತವನ್ನೂ ಮರುಸ್ಥಾಪಿಸಿ, ಈ ಐತಿಹಾಸಿಕ ಅನ್ಯಾಯವನ್ನು ಸರಿಪಡಿಸದಿದ್ದರೆ, ಮುಂಬರುವ ಬಂಗಾಳದ ಚುನಾವಣೆಯು ಪ್ರಜಾಪ್ರಭುತ್ವದ ಅತಿದೊಡ್ಡ ಅಣಕವಾಗಿ, ಭಾರತದ ಚುನಾವಣಾ ಇತಿಹಾಸದಲ್ಲಿ ಎಂದಿಗೂ ಅಳಿಸಲಾಗದ ಒಂದು ಕಪ್ಪು ಚುಕ್ಕೆಯಾಗಿ ದಾಖಲಾಗುವುದರಲ್ಲಿ ಯಾವುದೇ ಸಂದೇಹವಿಲ್ಲ.

ಜಗತ್ತನ್ನೇ ಆಳಬೇಕೆಂದು ಜಿಯೋನಿಸ್ಟರು ರೂಪಿಸಿದ್ದ ಸಂಚಿನ ಬಗ್ಗೆ 1969ರಲ್ಲಿಯೇ ಸುಳಿವು ನೀಡಿದ್ದ ದಲಿತ ನಾಯಕ ಬಿ. ಶ್ಯಾಮ್

ಅಲಹಾಬಾದಿನಲ್ಲಿ ನಡೆದ ಪ್ಯಾಲೆಸ್ತೀನ್ ಚಳವಳಿ ಸಮ್ಮೇಳನದ ಅಧ್ಯಕ್ಷತೆಯನ್ನು ಬಿ. ಶ್ಯಾಮ್ ಸುಂದರ್ ವಹಿಸಿದ್ದರು. ಅಂದು ಅವರ ಮಾಡಿದ ಭಾಷಣವನ್ನು ದಲಿತ್‌ವಾಯ್ಸ್ ಪತ್ರಿಕೆಯು ತನ್ನ 2001ರ ಅಕ್ಟೋಬರ್ 16ರ ಸಂಚಿಕೆಯಲ್ಲಿ ಮೊದಲ ಬಾರಿಗೆ ಇಂಗ್ಲೀಷಿನಲ್ಲಿ ಪ್ರಕಟಿಸಿತ್ತು. ಇಸ್ರೇಲಿನ ಅಟ್ಟಹಾಸಗಳು ಎಗ್ಗಿಲ್ಲದೆ ಸಾಗುತ್ತಿರುವ ಹೊತ್ತಿನಲ್ಲಿಯೇ ಅನ್ನು ಆಚರಿಸುತ್ತಿದ್ದೇವೆ. ಈ ಹಿನ್ನಲೆಯಲ್ಲಿ ಜಿಯೋನಿಸ್ಟರ ಸಂಚನ್ನು ಬಯಲಿಗೆಳೆಯುವ ಶ್ಯಾಮ್ ಸುಂದರ್ ಅವರ ಭಾಷಣವನ್ನು ಬೆಂಗಳೂರಿನ ಜೈನ್ ವಿಶ್ವವಿದ್ಯಾಲಯದ ಜ್ಞಾನಶಾಸ್ತ್ರ ವಿಭಾಗದಲ್ಲಿ ಅರೆಕಾಲಿಕ ಉಪನ್ಯಾಸಕರಾಗಿರುವ ಶಶಾಂಕ್ ಎಸ್ ಆರ್ ತಮ್ಮ ಓದಿಗಾಗಿ ಅನುವಾದಿಸಿದ್ದಾರೆ

(ಬಿ. ಶ್ಯಾಮ್ ಸುಂದರ್ ಅವರು ಹೈದರಾಬಾದ್ ಮೂಲದ ಪ್ರಖ್ಯಾತ ಚಿಂತಕರು, ಸಂಸದೀಯ ಪಟು ಮತ್ತು ಭೀಮ್ ಸೇನೆಯ ಸ್ಥಾಪಕರು. ಅವರು ಕರ್ನಾಟಕದ ದಲಿತ ಚಳವಳಿಗೆ ಹೈದರಾಬಾದ್- ಕರ್ನಾಟಕದಲ್ಲಿ ಅಪಾರ ಕೊಡುಗೆ ನೀಡಿದವರು. ಡಾ. ಬಿ.ಆರ್. ಅಂಬೇಡ್ಕರ್ ಅವರ ನಿಕಟವರ್ತಿಯಾಗಿಯೂ ಆಗಿದ್ದ ಶ್ಯಾವ್ ಸುಂದರರು ದಲಿತ ಮತ್ತು ಶೋಷಿತ ಸಮುದಾಯಗಳ ಹಕ್ಕುಗಳಿಗಾಗಿ ಹೋರಾಡುವುದರ ಜೊತೆಜೊತೆಗೆ ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಮಾನವ ಹಕ್ಕುಗಳ ಪರವಾಗಿಯೂ ದನಿ ಎತ್ತಿದವರು.

ಇತ್ತೀಚಿನ ದಿನಗಳಲ್ಲಿ ಇಸ್ರೇಲ್, ಪ್ಯಾಲೆಸ್ತೀನಿನ ಮತ್ತು ಇರಾನಿನ ಮೇಲೆ ನಡೆಸುತ್ತಿರುವ ನಿರಂತರ ದಾಳಿಗಳು ಜಾಗತಿಕ ಮಟ್ಟದಲ್ಲಿ ಆತಂಕ ಮೂಡಿಸಿವೆ. ಇಂತಹ ಸಂದರ್ಭದಲ್ಲಿ, ಬಿ. ಶ್ಯಾಮ್ ಸುಂದರ್ ಅವರು 1969ರಲ್ಲಿ ಅಲಹಾಬಾದ್‌ನಲ್ಲಿ ನಡೆದ ಪ್ಯಾಲೆಸ್ತೀನ್ ಚಳವಳಿ ಸಮ್ಮೇಳನದ ಅಧ್ಯಕ್ಷತೆ ವಹಿಸಿ ಮಾಡಿದ ಭಾಷಣವು ಇಂದಿಗೂ ಅತ್ಯಂತ ಪ್ರಸ್ತುತ ಎನಿಸುತ್ತದೆ. ದಲಿತ ಇತಿಹಾಸ ಮಾಸದ ( ) ಅಂಗವಾಗಿ, ತುಳಿತಕ್ಕೊಳಗಾದವರ ಪರವಾಗಿ ದನಿ ಎತ್ತುವ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಶಾಂತಿ ಹಾಗೂ ನ್ಯಾಯವನ್ನು ಪ್ರತಿಪಾದಿಸುವ ಅವರ ಆಶಯಗಳನ್ನು ಇಂದಿನ ಪೀಳಿಗೆಗೆ ಪರಿಚಯಿಸುವ ಉದ್ದೇಶದಿಂದ ಮತ್ತು ಇಸ್ರೇಲಿನ ಜಿಯೋನಿಷ್ಟ್ ಸಿದ್ಧಾಂತವನ್ನೂ ಅದರ ಹಿಂದಿನ ಬಂಡವಾಳಶಾಹಿಗಳ ಹಿತಾಸಕ್ತಿಯನ್ನು ಅವರು ಅಂದೇ ಬಟಾಬಯಲುಗೊಳಿಸಿದ್ದರು ಮಾತ್ರವಲ್ಲ, ಭಾರತದ ದಲಿತರೂ ಮಧ್ಯಪ್ರಾಚ್ಯದ ಅರಬ್ಬರೂ ದಮನಿತ ಸಮುದಾಯಗಳೇ ಆಗಿರುವುದರಿಂದ ಭಾರತದ ಜನರು ಅರಬ್ಬರ ಸಂಕಷ್ಟಗಳಿಗೆ ಮಿಡಿಯಬೇಕೆಂದು ಪ್ರತಿಪಾದಿಸುತ್ತಾರೆ. ಆ ಕಾರಣಕ್ಕೆ ಅವರು ಅಂದು ಮಾಡಿದ ಭಾಷಣದ ಕನ್ನಡ ಅನುವಾದವನ್ನು ಪ್ರಸ್ತುತ ಪಡಿಸುತ್ತಿದ್ದೇವೆ. ಇಂದು ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಸಂಘರ್ಷಗಳ ಹಿನ್ನೆಲೆಯಲ್ಲಿ ಗಮನಿಸಿದರೆ ಅವರ ಭಾಷಣವನ್ನು ಹೊಸ ಆಯಾಮ ಮತ್ತು ದೃಷ್ಟಿಕೋನಗಳಿಂದಲೂ ನೋಡಬಹುದು)



ಅಲಹಾಬಾದಿನಲ್ಲಿ ನಡೆಯುತ್ತಿರುವ ''ಪ್ಯಾಲೆಸ್ತೀನಿ ಚಳವಳಿಯ ಸಮ್ಮೇಳನ''ದ ಅಧ್ಯಕ್ಷತೆ ವಹಿಸಬೇಕು ಎಂದು ಲಖನೌನಿಂದ ಪತ್ರ ತಲುಪಿದಾಗ, ನಾನು ಆ ಪ್ರಸ್ತಾಪದ ಬಗ್ಗೆ ಸ್ವಲ್ಪ ಸಮಯ ಯೋಚಿಸಿದೆ. ನಂತರಷ್ಟೇ ನಾನದನ್ನು ಒಪ್ಪಿಕೊಂಡೆ. ಅದಕ್ಕೆ ಕಾರಣ ಅರಬ್ಬರಂತೆ ತಮ್ಮದೇ ನಾಡಿನಲ್ಲಿ, ತಮ್ಮದೇ ಸ್ವಂತ ನೆಲದಲ್ಲಿ ನಿರಾಶ್ರಿತರಾಗಿರುವ ದಮನಿತ ಮತ್ತು ತುಳಿತಕ್ಕೊಳಗಾದ ಜನರನ್ನೇ ನಾನೂ ಕೂಡಾ ಪ್ರತಿನಿಧಿಸುತ್ತಿದ್ದೇನೆ ಎಂಬುದೇ ಆಗಿದೆ. ಇಸ್ರೇಲಿನ ಆಡಳಿತಗಾರು ಪ್ಯಾಲೆಸ್ತೀನಿಗೆ ಎಷ್ಟು ಪರಕೀಯರೋ; ಇಂದು ನಮ್ಮನ್ನು ಆಳುತ್ತಿರುವ, ಭಾರತದ ಮೇಲೆ ಆಕ್ರಮಣ ನಡೆಸಿದ ಆರ್ಯರು ಕೂಡಾ ಈ ದೇಶಕ್ಕೆ ಅಷ್ಟೇ ಪರಕೀಯರು ಎಂಬ ವಿಚಾರ ಜಗತ್ತಿಗಿನ್ನೂ ತಿಳಿದಿಲ್ಲ. ತಮ್ಮ ಪುರೋಹಿತರ ಕೃಪೆಯಿಂದಾಗಿ ಹಾಗೂ ತಮ್ಮ ದೇವರ ಹಾಗೂ ಧರ್ಮದ ಹೆಸರಿನಲ್ಲಿ ಅವರು ನಮ್ಮ ಭೂಮಿಯನ್ನು ವಶಪಡಿಸಿಕೊಂಡರು. ನಮ್ಮ ಆಸ್ತಿಗಳನ್ನು ಕಿತ್ತುಕೊಂಡರು. ನಮ್ಮ ಸಂಸ್ಕೃತಿಯನ್ನೇ ಹಾಳುಗೆಡವಿ ಇಂದು ನಮ್ಮನ್ನು ಈ ಹಂತಕ್ಕೆ ಅಂದರೆ, ನಾವು ಹಿಂದೂ ಸಮುದಾಯದ ದಾಸರು (ಸರ್ಫ್ಸ್) ಮತ್ತು ಆಶ್ರಿತರು (ಡಿಪೆಂಡೆಂಟ್ಸ್) ಎಂದು ಕರೆಯಲ್ಪಡುವ ಮಟ್ಟಿಗೆ ತಂದು ನಿಲ್ಲಿಸಿದ್ದಾರೆ.

ಕಾಲ ಮಿಂಚಿಹೋಗುವ ಮುನ್ನ ಅರಬ್ಬರು ಒಂದುಗೂಡಿ ವಿದೇಶಿ ನುಸುಳುಕೋರರನ್ನು ಹೊರಹಾಕದಿದ್ದರೆ ಅವರ ಸ್ಥಿತಿಯೂ ನಮ್ಮಂತೆಯೇ ಆಗುತ್ತದೆ ಎಂಬ ಭಯ ನನ್ನದು. ಈ ಭಯವೇ ನನ್ನನ್ನು ಇಲ್ಲಿಗೆ ಬಂದು, ನಿಮ್ಮ ಮುಂದೆ ಈ ವಿಚಾರದ ಬಗ್ಗೆ ನನ್ನ ಅಭಿಪ್ರಾಯಗಳನ್ನು ಮಂಡಿಸುವಂತೆ ಪ್ರೇರೇಪಿಸಿತು. ನಿಜವಾಗಿಯೂ ಹೇಳಬೇಕೆಂದರೆ, ಭಾರತದ ಖಾಕ್ಸರ್ ಚಳವಳಿ ದಮನಿತ ಜನಾಂಗಗಳ ಹಕ್ಕುಗಳು ಮತ್ತು ಸ್ವಾತಂತ್ರ್ಯಕ್ಕಾಗಿ ದನಿಯೆತ್ತಿದೆ. ವಿದೇಶಿ ನೊಗದಿಂದ ಇತ್ತೀಚೆಗಷ್ಟೇ ಬಿಡಿಸಿಕೊಂಡ ಭಾರತೀಯರಾದ ನಾವು ಅರಬ್ಬರ ಹೋರಾಟವನ್ನು ಬೆಂಬಲಿಸುವುದು ಸಮಂಜಸವೇ ಆಗಿದೆ. ಕಾರಣ, ಅರಬ್ಬರು ಕೂಡಾ ವಿದೇಶಿ ಪ್ರಾಬಲ್ಯಕ್ಕೆ ಸಿಲುಕಿ ಅತೀವ ತೊಂದರೆಗೆ ಒಳಗಾಗುತ್ತಿದ್ದಾರೆ.

ಸ್ನೇಹಿತರೇ, ಜಾಗತಿಕ ರಾಜಕಾರಣದ ಸಂದರ್ಭದಲ್ಲಿ ''ಇಂಟರ್ ನ್ಯಾಷನಲ್ ಜ್ಯೂರಿ'' (ಅಂತರಾಷ್ಟ್ರೀಯ ಯಹೂದಿ ಸಮುದಾಯ) ಎಂಬ ಪದವನ್ನು ಮೊದಲು ಪೂರ್ತಿಯಾಗಿ ಅರ್ಥೈಸಿಕೊಳ್ಳೋಣ. ಪ್ಯಾಲೆಸ್ತೀನಿ ಚಳವಳಿಯ ತುಡಿತಗಳನ್ನು ನಿಜವಾಗಿಯೂ ಅರಿತು ಪ್ರಶಂಶಿಸಬೇಕೆಂದರೆ ಇದು ಅವಶ್ಯಕ. ಮೇಲುನೋಟಕ್ಕೆ ಜಗತ್ತು ಅಮೆರಿಕ ನೇತೃತ್ವದ ಬಂಡವಾಳಶಾಹಿ ದೇಶಗಳು ಮತ್ತು ರಷ್ಯಾ ನೇತೃತ್ವದ ಕಮ್ಯುನಿಸ್ಟ್ ದೇಶಗಳೆಂಬ ಎರಡು ಬಣಗಳಾಗಿ ಒಡೆದಿವೆ. ಆದರೆ ವಾಸ್ತವದಲ್ಲಿ ಬಂಡವಾಳಶಾಹಿ ಬಣವು ಮೂಲಭೂತವಾಗಿ ಯಹೂದಿ ಪ್ರೇರಿತವಾಗಿದೆ. ''ಅಂತರ ರಾಷ್ಟ್ರೀಯ ಯಹೂದಿ ಸಮುದಾಯವು'' ಪ್ರಪಂಚದ ರಾಜಕೀಯ ಇತಿಹಾಸದಲ್ಲಿ ಪ್ರಬಲ ಪಾತ್ರವೊಂದನ್ನು ವಹಿಸಿದೆ.

ಬ್ರಿಟನ್, ಫ್ರಾನ್ಸ್ ಮತ್ತು ವಿಶೇಷವಾಗಿ ಅಮೆರಿಕವು ಯಹೂದಿಗಳ ಪ್ರಭಾವದಲ್ಲಿವೆ ಎಂಬುದು ಹೆಚ್ಚೂ-ಕಡಿಮೆ ಎಲ್ಲರಿಗೂ ತಿಳಿದಿರುವ ಮತ್ತು ಎಲ್ಲರೂ ಒಪ್ಪಿಕೊಳ್ಳುವಂತಹ ವಿಚಾರವೇ ಆಗಿದೆ. ಆದರೆ ಕಮ್ಯುನಿಸ್ಟ್ ಚಳವಳಿಯ ಅತ್ಯುನ್ನತ ಚಿಂತಕರೂ ಕೂಡಾ ಯಹೂದಿಗಳೇ ಆಗಿದ್ದಾರೆ ಎಂದು ಹೇಳಿದರೆ, ಅನೇಕರು ಹುಬ್ಬೇರಿಸುತ್ತಾರೆ. ಕಾರ್ಲ್ ಮಾರ್ಕ್ಸ್ ಒಬ್ಬ ಯಹೂದಿ. ಟ್ರಾಟ್ಸ್ಕಿ ಮತ್ತು ಲೆನಿನ್ ಕೂಡಾ ಯಹೂದಿ ಮೂಲದವರೇ ಆಗಿದ್ದರು. ಲೆನಿನ್ ರಷ್ಯಾ ಪ್ರವೇಶಿಸಿದ ಕೂಡಲೇ, ಟ್ರಾಟ್ಸ್ಕಿ ಕೂಡ ಅಮೆರಿಕದಿಂದ 300 ಯಹೂದಿಗಳ ತಂಡದೊಂದಿಗೆ ಅಲ್ಲಿಗೆ ಬಂದಿಳಿದರು. ನಂತರ ಈ ಎಲ್ಲಾ ಯಹೂದಿಗಳು ರಷ್ಯಾದ ಇತರ ಪ್ರಗತಿಪರ ಗುಂಪುಗಳೊಂದಿಗೆ ಸೇರಿ ರಷ್ಯಾದ ಕ್ರಾಂತಿಯ ರೂಪುರೇಷೆಗಳನ್ನು ತಯಾರಿಸಿ ಅದನ್ನು

ಇದರ ಹಿಂದಿನ ಕಾರಣ ಬಹಳ ಸ್ಪಷ್ಟ. ಈ ದಾಖಲೆಯು ಚಲಾವಣೆಗೆ ಬಂದರೆ ಜಿಯೋನಿಸಂನ ಅಂತಿಮ ವಿನ್ಯಾಸ ಜಗಜ್ಜಾಹಿರಗೊಳುತ್ತದೆ ಎಂಬುದೇ ಆಗಿತ್ತು. ಕಾರ್ಲ್ ಮಾರ್ಕ್ಸ್ ಮತ್ತು ಲೆನಿನ್ ಮಂಡಿಸಿದ ಅಂತರಾಷ್ಟ್ರೀಯ ಕಮ್ಯುನಿಸಂನ ಪರಿಕಲ್ಪನೆಯು ಜಿಯೋನಿಸ್ಟರ ಮಹತ್ವಾಕಾಂಕ್ಷೆಯ ಈ ಯೋಜನೆಯನ್ನು ವಿಫಲಗೊಳಿಸಿಬಿಡುತ್ತಿತ್ತು. ಲೆನಿನ್ನಿನ ಮರಣದ ನಂತರ ಸ್ಟಾಲಿನ್ ಟ್ರಾಟ್ಸ್ಕಿಯನ್ನು ಸೋಲಿಸಿದ್ದು ಅಂತರಾಷ್ಟ್ರೀಯ ಕಮ್ಯುನಿಸಂ ಪರಿಕಲ್ಪನೆಯನ್ನು ಕೊನೆಗಾಣಿಸಿತು. ಇದು ಅಂತರ ರಾಷ್ಟ್ರೀಯ ಜಿಯೋನಿಸಂಗೆ ಇಂಬು ನೀಡಿತು. ಟ್ರಾಟ್ಸ್ಕಿ ಮಾರ್ಕ್ಸ್‌ವಾದದ ಅಪ್ರತಿಮ ಬೆಂಬಲಿಗರಾಗಿದ್ದರು ಮಾತ್ರವಲ್ಲ, ಜಿಯೋನಿಸಮ್ಮಿನ ವಿರುದ್ಧವಾಗಿ ಅಂತರ ರಾಷ್ಟ್ರೀಯ ಕಮ್ಯುನಿಸಂನ ಬೆಂಬಲಿಗರಾಗಿದ್ದರು.

ವಿಶ್ವಸಂಸ್ಥೆ () ಸ್ಥಾಪನೆಗೊಂಡಾಗ ಆಂಗ್ಲೋ-ಅಮೆರಿಕನ್ ಜಿಯೋನಿಸಮ್ಮಿನ ಪ್ರತಿಪಾದಕರು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಅಧಿಕಾರವನ್ನು ವಶಪಡಿಸಿಕೊಳ್ಳಲು ಮತ್ತೊಂದು ಅವಕಾಶವನ್ನು ಕಂಡುಕೊಂಡರು. ಹೀಗೆ ಮಾಡಿದರೆ ಕಾಲಾಂತರದಲ್ಲಿ ಹಿಂದುಳಿದ ಏಷ್ಯನ್ ಮತ್ತು ಆಫ್ರಿಕನ್ ಜನರ ಮೇಲೆ ತಮ್ಮ ಆರ್ಥಿಕ ಪ್ರಾಬಲ್ಯವನ್ನು ಸ್ಥಾಪಿಸಿಕೊಂಡು ಆ ಮೂಲಕ ಜನ ಚಳವಳಿಯನ್ನು ಸೋಲಿಸಬಹುದು ಎಂಬುದನ್ನು ಆಂಗ್ಲೋ-ಅಮೆರಿಕನ್ ಜಿಯೋನಿಸಂ ಕಂಡುಕೊಂಡಿತು.

ಸ್ನೇಹಿತರೇ, ವಾಸ್ತವದಲ್ಲಿ ಆಂಗ್ಲೋ-ಅಮೆರಿಕನ್ ಜಿಯೋನಿಸಂ ತನ್ನ ಅಂತರ ರಾಷ್ಟ್ರೀಯ ಮಟ್ಟದ ಕುತಂತ್ರಗಳನ್ನು ಚಲಾವಣೆಗೆ ತರಲು ಬಳಸುವ ವಾಹನಗಳಲ್ಲಿ ವಿಶ್ವಸಂಸ್ಥೆಯೂ ಒಂದಾಗಿದೆ ಎಂಬುದನ್ನು ನೀವು ನಂಬುವಿರಾ? ವಿಶ್ವಸಂಸ್ಥೆಯ ಅತ್ಯಂತ ಪ್ರಮುಖ ಶಾಖೆಗಳಲ್ಲಿ, ಕನಿಷ್ಠ 73 ಯಹೂದಿಗಳು ಅತ್ಯುನ್ನತ ಮಟ್ಟದ ಹುದ್ದೆಗಳನ್ನು ಹೊಂದಿದ್ದಾರೆ. ವಿಶ್ವಸಂಸ್ಥೆಯ ಸೆಕ್ರೆಟರಿಯೆಟ್ಟಿನಲ್ಲಿ, ಯುನೆಸ್ಕೋ ()ವಿನ 22 ಅತ್ಯಂತ ಪ್ರಮುಖ ವಿಭಾಗಗಳ ಮುಖ್ಯಸ್ಥರು ಯಹೂದಿಗಳೇ ಆಗಿದ್ದಾರೆ. ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ () ಮೂರು ಶಾಖೆಗಳು ಇಂತಹ ಯಹೂದಿ ಅಧಿಕಾರಿಗಳ ಕೈಯಲ್ಲಿವೆ. ಆಹಾರ ಮತ್ತು ಕೃಷಿ ಸಂಸ್ಥೆಯ () ಪ್ರಮುಖ ವಿಭಾಗಗಳ ಮುಖ್ಯಸ್ಥರಾಗಿ 11 ಜನರು ಯಹೂದಿಗಳಿದ್ದಾರೆ. ವಿಶ್ವ ಬ್ಯಾಂಕ್ ಮತ್ತು ಅಂತರ ರಾಷ್ಟ್ರೀಯ ಹಣಕಾಸು ನಿಧಿ ()ಯಲ್ಲಿ ಕ್ರಮವಾಗಿ ಆರು ಮತ್ತು ಒಂಬತ್ತು ಇಲಾಖೆಗಳನ್ನು ಮುನ್ನಡೆಸುತ್ತಿರುವ ಮುಖ್ಯಸ್ಥರು ವಿಶ್ವ ಯಹೂದಿ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ನ್ಯೂಯಾರ್ಕ್‌ನ ಪ್ರಸಿದ್ಧ ಯಹೂದಿ ವಕೀಲ ಹೆನ್ರಿ ಕ್ಲೈನ್ ತಮ್ಮ ''ಜಿಯೋನ್ಸ್ರೂಲ್ ದಿ ವರ್ಲ್ಡ್'' ಎಂಬ ಪುಸ್ತಕದಲ್ಲಿ ಹೀಗೆ ಬರೆದಿದ್ದಾರೆ:

''ವಿಶ್ವಸಂಸ್ಥೆ ಜಿಯೋನಿಸಮ್ಮೇ ಆಗಿದೆ. 1897-1905ರ ನಡುವೆ ರೂಪಿಸಲಾದ ಪ್ರೊಟೊಕಾಲ್ಸ್ ಆಫ್ ದಿ ಲರ್ನ್ಡ್ ಎಲ್ಡರ್ಸ್ ಆಫ್ಜಿಯೋನ್ ನಲ್ಲಿ ಹಲವು ಬಾರಿ ಉಲ್ಲೇಖಿಸಲಾದ ಸೂಪರ್ ಗವರ್ನಮೆಂಟ್ ವಿಶ್ವಸಂಸ್ಥೆಯೇ ಆಗಿದೆ.''

ಯಹೂದಿಗಳು ಅರಬ್ಬರನ್ನು ದಾರಿತಪ್ಪಿಸಿದರು

ಯಹೂದಿ ಇಸ್ರೇಲೈಟ್ ಅಲೈಯನ್ಸ್ ಯೂನಿವರ್ಸೆಲ್ಲೇನ ಸದಸ್ಯರಾದ ಜೀನ್ ಇಜೌಲೆಟ್ 1931ರಲ್ಲಿ ''ಪ್ಯಾರಿಸ್ ಲಾ ಕ್ಯಾಪಿಟಲ್ ಡೆಸ್ ರಿಲಿಜಿಯನ್ಸ್'' ನ ಲೇಖನದಲ್ಲಿ ಹೀಗೆ ಬರೆದಿದ್ದಾರೆ:

''ಕಳೆದ ಶತಮಾನದ ಇತಿಹಾಸದಿಂದ ಅರ್ಥವಾಗುವುದು ಏನೆಂದರೆ, ಮುನ್ನೂರು ಯಹೂದಿ ಬಂಡವಾಳಿಗರು ಇಂದು ಜಗತ್ತನ್ನು ಆಳುತ್ತಿದ್ದಾರೆ ಎಂಬುದು. ಇವರೆಲ್ಲರೂ ಲಾಡ್ಜುಗಳ ಮಾಲೀಕರೇ ಆಗಿದ್ದಾರೆ ಎಂಬುದನ್ನೂ ಗಮನಿಸಬೇಕು.''

ಜಿಯೋನಿಸ್ಟರು ಅಂತರ ರಾಷ್ಟ್ರೀಯ ಕಮ್ಯುನಿಸಂನ ಹೆಸರಿನಲ್ಲಿ ಜನರ ಕಣ್ಣಿಗೆ ಮಣ್ಣೆರಚಲು ಸಹ ಪ್ರಯತ್ನಿಸಿದ್ದಾರೆ. ಜಿಯೋನಿಸಮ್ಮಿನ ಮೂಲ ಸಂಚುಕೋರ ಥಿಯೋಡರ್ ಹರ್ಜ್ಲ್ ಅವರ ಬರವಣಿಗೆಯಿಂದ ಅಂತಹ ಮನೋಭಾವದ ಮಾದರಿಯನ್ನು ಅರಿಯಬಹುದಾಗಿದೆ. ಅವರು ತಮ್ಮ ''ದಿ ಜ್ಯೂಯಿಷ್ ಸ್ಟೇಟ್'' (1896) ಪುಸ್ತಕದಲ್ಲಿ ಹೀಗೆ ಹೇಳುತ್ತಾರೆ:

''ನಾವು ಮುಳುಗಿದಾಗ, ಕ್ರಾಂತಿಕಾರಿ ಕಾರ್ಮಿಕ ವರ್ಗವಾಗುತ್ತೇವೆ. ಹೀಗೆ, ಕ್ರಾಂತಿಕಾರಿ ಪಕ್ಷದ ಅಧೀನರಾಗಿ ಕೆಲಸ ಮಾಡುವ ಕೆಳ ಹಂತದ ಅಧಿಕಾರಿಗಳಾಗುತ್ತೇವೆ; ಆದರೆ ಮೈಕೊಡವಿ ಮೇಲೆದ್ದಾಗ, ನಮ್ಮ ಜೇಬಿನಲ್ಲಿರುವ ಹಣದ ಶಕ್ತಿಯೂ ಭಯಂಕರವಾಗಿ ಬೆಳೆಯುತ್ತದೆ.''

ಅಂತರ ರಾಷ್ಟ್ರೀಯ ಜಿಯೋನಿಸಮ್ಮಿನ ಬಗ್ಗೆ ಇಷ್ಟು ತಿಳಿದದ್ದು ಸಾಕೆನಿಸುತ್ತದೆ. ಈಗ ಮಧ್ಯಪ್ರಾಚ್ಯದ ಪರಿಸ್ಥಿತಿಯನ್ನು ಗಮನಿಸೋಣ. 1917ರಲ್ಲಿ, ಲಾರ್ಡ್ ಬಾಲ್ಫರ್ ಪ್ಯಾಲೆಸ್ತೀನಿನಲ್ಲಿ ಯಹೂದಿಗಳಿಗಾಗಿ ''ತಾಯ್ನಾಡು, ಇಲ್ಲವೇ ನ್ಯಾಷನಲ್ ಹೋಮ್'' ಕಲ್ಪಿಸುವುದಾಗಿ ಕುಖ್ಯಾತ ಘೋಷಣೆಯೊಂದನ್ನು ಹೊರಡಿಸಿದಾಗ ಪ್ಯಾಲೆಸ್ತೀನಿನ ಜನಸಂಖ್ಯೆಯ ಶೇ. 92 ರಷ್ಟು ಅರಬ್ಬರಿದ್ದರು ಮತ್ತು ಪ್ಯಾಲೆಸ್ತೀನಿನಲ್ಲಿ ಇದ್ದದ್ದು ಕೇವಲ 56,000 ಯಹೂದಿಗಳು. ಈ ಘೋಷಣೆಯು ಅನೈತಿಕವೂ, ಅನ್ಯಾಯಕಾರಿಯೂ ಮತ್ತು ಕಾನೂನುಬಾಹಿರವೂ ಆಗಿತ್ತು. ಅಲ್ಲದೇ ಅದು ಕೇವಲ ಬ್ರಿಟಿಷ್ ಸಾಮ್ರಾಜ್ಯಶಾಹಿ ಹಿತಾಸಕ್ತಿಗಳನ್ನು ಒಳಗೊಂಡಿತ್ತು ಎಂಬುದು ಇಡೀ ಜಗತ್ತಿಗೆ ತಿಳಿದ ವಿಷಯ.

ಇಸ್ರೇಲಿನ ರಚನೆಯಲ್ಲಿ ಅಮೆರಿಕದ ಹಸ್ತ

ವಿಶ್ವ ಯಹೂದಿ ಸಮುದಾಯಕ್ಕೆ ಪ್ಯಾಲೆಸ್ತೀನನ್ನು ಉಡುಗೊರೆಯಾಗಿ ನೀಡಿದ್ದು ಏಕಪಕ್ಷೀಯ ನಿರ್ಧಾರವಾಗಿತ್ತು. ಇಂತಹ ನಿರ್ಧಾರವನ್ನು ಕೈಗೊಳ್ಳುವಾಗ ಜನಸಂಖ್ಯೆಯಲ್ಲಿ ಬಹುಸಂಖ್ಯಾತರಾಗಿದ್ದ ಅರಬ್ಬರನ್ನು ಗಣನೆಗೆ ತೆಗೆದುಕೊಳ್ಳಲಾಗಿರಲಿಲ್ಲ. ಅಲ್ಲದೇ ಇದು ಪ್ಯಾಲೆಸ್ತೀನಿನ ಅರಬ್ಬರ ಸ್ವಯಂ-ನಿರ್ಣಯದ (-) ಹಕ್ಕಿನ ನಿರಾಕರಣೆಯಾಗಿತ್ತು.

ನಂತರ ಹಿಟ್ಲರಿನ ಜರ್ಮನಿಯಲ್ಲಿ ಯಹೂದಿಗಳ ಮೇಲೆ ನಡೆದ ತೀವ್ರ ಹಿಂಸಾಚಾರಕ್ಕೆ ಪ್ರತಿಕ್ರಿಯೆಯಾಗಿ ಎಲ್ಲಡೆ ಚದುರಿಹೋಗಿದ್ದ ಅಂತರ ರಾಷ್ಟ್ರೀಯ ಯಹೂದಿಗಳಿಗೆ ''ತಾಯ್ನಾಡು ಇಲ್ಲವೇ ನ್ಯಾಷನಲ್ ಹೋಮ್ ಲ್ಯಾಂಡ್'' ಅನ್ನು ಒದಗಿಸಲು ಪ್ರಯತ್ನಿಸಲಾಯಿತು.

ಇಸ್ರೇಲ್ ಆಂಗ್ಲೋ-ಅಮೆರಿಕನ್ ರಾಜತಾಂತ್ರಿಕತೆಯ ಸೃಷ್ಟಿಯೇ ಆಗಿರುವುದು ನಮ್ಮೆಲ್ಲರಿಗೂ ತಿಳಿದಿದೆ. ಇಸ್ರೇಲಿನ ರಚನೆಯೊಂದಿಗೆ ಆಂಗ್ಲೋ-ಅಮೆರಿಕನ್ ಬಂಡವಾಳಶಾಹಿ ಹಿತಾಸಕ್ತಿಯೂ ಬೆಳೆಯುತ್ತಲೇ ಸಾಗಿತು ಎಂಬುದೂ ಕೂಡಾ ನಮಗೆ ಈಗಾಗಲೇ ತಿಳಿದಿದೆ.

ಪ್ಯಾಲೆಸ್ತೀನನ್ನು ಬ್ರಿಟಿಷಿನವರು ಆಕ್ರಮಿಸಿಕೊಂಡು ಆಡಳಿತ ನಡೆಸಿದ 1918 ಮತ್ತು 1948ರ ನಡುವಿನ 30 ವರ್ಷಗಳಲ್ಲಿ, ಜಿಯೋನಿಸ್ಟರು ಪ್ಯಾಲೆಸ್ತೀನಿನ ಕೇವಲ 3.5% ರಷ್ಟು ಭೂ-ಭಾಗವನ್ನು ಮಾತ್ರವೇ ವಶಪಡಿಸಿಕೊಳ್ಳಲು ಸಾಧ್ಯವಾಯಿತು. ಬ್ರಿಟಿಷರು ಪ್ಯಾಲೆಸ್ತೀನಿನ ಸಮಸ್ಯೆಯನ್ನು ವಿಶ್ವಸಂಸ್ಥೆಯ ಮಡಿಲಿಗೆ ಹಾಕಿದಾಗ ಇಸ್ರೇಲ್ ಭಯೋತ್ಪಾದನೆ ಮತ್ತು ಸಾಮೂಹಿಕ ಹತ್ಯೆಗಳ ಮೂಲಕ ಪ್ಯಾಲೆಸ್ತೀನಿನ ಒಟ್ಟು ವಿಸ್ತೀರ್ಣದ ಶೇ. 77 ರಷ್ಟನ್ನು ಆಕ್ರಮಿಸಿಕೊಂಡಿತು. ಅಂತರ ರಾಷ್ಟ್ರೀಯ ರೆಡ್ ಕ್ರಾಸಿನ ಪ್ರತಿನಿಧಿಯಾಗಿದ್ದ ಪ್ರತ್ಯಕ್ಷದರ್ಶಿ ದೀರ್ ಯಸ್ಸೀನ್ ಅವರ ವರದಿಯ ಪ್ರಕಾರ, ಏಪ್ರಿಲ್ 9 ರಂದು ಅರಬ್ಬರ ಗ್ರಾಮವೊಂದರ ಮೇಲೆ ಎರಡು ಯಹೂದಿ ಗುಂಪುಗಳು ದಾಳಿ ನಡೆಸಿದವು. ಈ ದಾಳಿಯಲ್ಲಿ ಅರಬ್ಬಿ ಪುರುಷರು, ಮಹಿಳೆಯರು ಮತ್ತು ಮಕ್ಕಳನ್ನೂ ಸೇರಿದಂತೆ ಒಟ್ಟು 254 ಜನರ ದೇಹಗಳನ್ನು ತುಂಡು-ತುಂಡಾಗಿಸಿಲಾಯಿತು ಮಾತ್ರವಲ್ಲ, ಅವರ ದೇಹಗಳನ್ನೆಲ್ಲಾ ಬಾವಿಯೊಂದರಲ್ಲಿ ಬಿಸುಟಲಾಯಿತು. ನಂತರ, ಆಕ್ರಮಿತ ಪ್ರದೇಶಗಳಲ್ಲಿ ಇಸ್ರೇಲಿ ಸೈನಿಕರು ಅರಬ್ಬರ ಮನೆಗಳನ್ನು ಸ್ಫೋಟಿಸಿದರು. ಇಸ್ರೇಲಿ ಅಧಿಕಾರಿಗಳು ವಿಧಿಸಿದ ಕರ್ಫ್ಯೂ ಸಂದರ್ಭವನ್ನು ಬಳಸಿಕೊಂಡು ಅನೇಕರನ್ನು ಕೊಲ್ಲಲಾಯಿತು.

ಪ್ಯಾಲೆಸ್ತೀನಿನಲ್ಲಿ ಯಹೂದಿ ರಾಷ್ಟ್ರ ಸ್ಥಾಪನೆಗಾಗಿ ಮಂಡಿಸಲಾಗಿದ್ದ ನಿರ್ಣಯಕ್ಕೆ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಬಹುಮತ ದೊರೆಯಲಿಲ್ಲ. ಆದರೂ, ಆಫ್ರೋ-ಏಷ್ಯನ್ ದೇಶಗಳ ಮೇಲೆ ಅಮೆರಿಕದ ಹೇರುತ್ತಿದ್ದ ಒತ್ತಡವು ಮಧ್ಯಪ್ರಾಚ್ಯದಲ್ಲಿ ಯಹೂದಿ ರಾಷ್ಟ್ರದ ರಚನೆಗೆ ದಾರಿಮಾಡಿಕೊಟ್ಟಿತು. ಅಮೆರಿಕದ ಸೆನೆಟರ್ ಲಾರೆನ್ಸ್ ಹೆಚ್. ಸ್ಮಿತ್ ಅವರು ಕಾಂಗ್ರೆಸ್‌ನಲ್ಲಿ ಮಾಡಿದ ಭಾಷಣದಲ್ಲಿ

''ನಮ್ಮ ನಿಯೋಗದವರು, ನಮ್ಮ ಅಧಿಕಾರಿಗಳು ಮತ್ತು ಅಮೆರಿಕದ ಖಾಸಗಿ ನಾಗರಿಕರು ಹೇರಿದ ಒತ್ತಡವು ಅವರಅರಬ್ಬರ ವಿರುದ್ಧದ ಮತ್ತು ನಮ್ಮ ವಿರುದ್ಧ ನಾವೇ ಹೂಡಿಕೊಂಡ ಅತ್ಯಂತ ಖಂಡನೀಯ ನಡವಳಿಕೆಯಾಗಿದೆ'' ಎಂದು ಪರಿತಪಿಸಿದರು.

ಪ್ಯಾಲೆಸ್ತೀನನ್ನು ವಿಭಜಿಸುವ ಯೋಜನೆಯ ಅಡಿ ಪ್ಯಾಲೆಸ್ತೀನಿನ ಒಟ್ಟು ಭೂಪ್ರದೇಶದಲ್ಲಿನ 56% ರಷ್ಟು ಭೂಪ್ರದೇಶದಲ್ಲಿ ಯಹೂದಿ ರಾಷ್ಟ್ರವನ್ನೂ, 2% ರಷ್ಟು ಭೂಪ್ರದೇಶದಲ್ಲಿ ಜೆರುಸಲೆಮ್‌ನ ಅಂತರ ರಾಷ್ಟ್ರೀಯ ವಲಯವನ್ನೂ ಮತ್ತು ಉಳಿದ 42% ರಷ್ಟು ಭೂ ಪ್ರದೇಶದಲ್ಲಿ ಅರಬ್ ರಾಷ್ಟ್ರವನ್ನು ಸ್ಥಾಪಿಸುವ ಪ್ರಸ್ತಾಪಿಸಲಾಗಿತ್ತು. ಆದರೆ ತೋಳ್ಬಲ ಮತ್ತು ಅಂತರ ರಾಷ್ಟ್ರೀಯ ಪಿತೂರಿಗಳಿಂದಾಗಿ ಇಸ್ರೇಲ್‌ಗೆ ಒಟ್ಟು ಭೂಪ್ರದೇಶದಲ್ಲಿ 77% ರಷ್ಟನ್ನು ನೀಡಲಾಯಿತು.

ವಿಶ್ವಸಂಸ್ಥೆಯ ಪರವಾಗಿ ಮಧ್ಯಸ್ಥಿಕೆ ವಹಿಸಲು ಹೋದವನ ಕೊಲೆ

ವಿಶ್ವಸಂಸ್ಥೆಯು ಕೌಂಟ್ ಫೋಲ್ಕೆ ಬರ್ನಾಡೋಟ್ ಎಂಬುವವರನ್ನು ಈ ವಿಚಾರದಲ್ಲಿ ಮಧ್ಯಸ್ಥಿಕೆ ವಹಿಸಲು ಪ್ಯಾಲೆಸ್ತೀನಿಗೆ ಕಳುಹಿಸಿತು. ಯಹೂದಿಗಳು ಅತನನ್ನೇ ಕೊಂದು ಬಿಟ್ಟರು. ಆತ ತನ್ನ ಕಟ್ಟಕಡೆಯ ವರದಿಯಲ್ಲಿ ''ಯಹೂದಿ ರಾಷ್ಟ್ರವು ಜನಸಿದ್ದು ನವೆಂಬರ್ 29, 1947ರ ನಿರ್ಣಯದಲ್ಲಿ ಆಶಿಸಿದಂತೆ, ಶಾಂತಿಯಿಂದಲ್ಲ. ಬದಲಿಗೆ ಹಿಂಸೆ ಮತ್ತು ರಕ್ತಪಾತದಿಂದ.'' ಎಂಬುದಾಗಿ ಬರೆದಿದ್ದನು.

ಅಲ್ಲದೇ, ಆತನ ಹತ್ಯೆಯ ಹಿಂದಿನ ದಿನ, ಅವನು

''ಪ್ರಸ್ತುತ ಉಂಟಾಗುತ್ತಿರುವ ಭಯೋತ್ಪಾದನೆ ಮತ್ತು ಯುದ್ಧಗಳಿಂದ ಉಂಟಾದ ಹಾನಿಗಳಿಂದಾಗಿ ತಮ್ಮ ಮನೆಗಳಿಂದಲೇ ಹೊರದೂಡಲ್ಪಟ್ಟ ಮುಗ್ಧ ಜನರಿಗೆ ಅವರ ಮನೆಗಳಿಗೆ ಹಿಂದಿರುಗುವಂತಹ ಹಕ್ಕನ್ನು ದೃಢೀಕರಿಸಬೇಕು ಮಾತ್ರವಲ್ಲ, ಅದನ್ನು ಜಾರಿಗೆ ತರಬೇಕು'' ಎಂದೂ ಘೋಷಿಸಿದ್ದನು.

ನವ ಯಹೂದಿ ರಾಷ್ಟ್ರವಾದ ಮತ್ತು ಅಂತರ ರಾಷ್ಟ್ರೀಯ ಜಿಯೋನಿಸಮ್ಮಿನ ಹೊಸ ತಾಯ್ನಾಡಾಗಿರುವ ಇಸ್ರೇಲನ್ನು ವಿಶ್ವಸಂಸ್ಥೆಯ ಸಾಮಾನ್ಯ ಸಭೆಗಳಲ್ಲಿ 1967ರಿಂದ ಇಲ್ಲಿಯವರೆಗೆ ಬರೋಬ್ಬರಿ 14 ಬಾರಿ ಖಂಡಿಸಲಾಗಿದೆ. ಸಾಲದೆಂಬಂತೆ, ಅರಬ್ ದೇಶಗಳ ಮೇಲಿನ ಸಶಸ್ತ್ರ ದಾಳಿಗಳಿಗಾಗಿ ಅದು 30 ಕ್ಕೂ ಹೆಚ್ಚು ಬಾರಿ ಖಂಡಿನೆಗೆ ಒಳಗಾಗಿದೆ. 1967ರ ಆಕ್ರಮಣದ ಪರಿಣಾಮವಾಗಿ, ಇಸ್ರೇಲ್ ತನ್ನ ಹಿಂದಿನ ಗಾತ್ರಕ್ಕಿಂತಲೂ ಮೂರು ಪಟ್ಟು ದೊಡ್ಡದಾದ ಭೂಪ್ರದೇಶವನ್ನು ಸ್ವಾಧೀನಪಡಿಸಿಕೊಂಡಿದೆ. ಅಲ್ಲದೇ 1.5 ಮಿಲಿಯನ್ನಿಗಿಂತಲೂ ಹೆಚ್ಚು ಅರಬ್ಬರನ್ನು ತಮ್ಮ ಮನೆಗಳಿಂದ ಮತ್ತು ಜಮೀನುಗಳಿಂದ ಹೊರದೂಡಲಾಗಿದೆ. ಡಾನ್ ಪೆರೆಟ್ಜ್ ಅವರ 1954ರಷ್ಟು ಹಳೆಯ ಅಂದಾಜಿನ ಪ್ರಕಾರವೇ 1948ರ ನಂತರ ಸ್ಥಾಪಿಸಲಾದ ಸರಿಸುಮಾರು 400 ಯಹೂದಿ ವಸಾಹತುಗಳಲ್ಲಿ 350 ವಸಾಹತುಗಳು ನಿರ್ಮಾಣಗೊಂಡಿದ್ದು ನಿರಾಶ್ರಿತರ ಆಸ್ತಿಗಳಲ್ಲಿಯೇ. ಅಲ್ಲದೇ, ಇಸ್ರೇಲ್ ಸ್ವಾಧೀನಪಡಿಸಿಕೊಂಡ ಕೃಷಿ ಭೂಮಿಯಲ್ಲಿ ಮೂರನೇ ಎರಡರಷ್ಟು ಜಮೀನುಗಳು ನಿರಾಶ್ರಿತರಿಗೆ ಸೇರಿದ್ದ ಜಮೀನುಗಳೇ ಆಗಿದ್ದವು.

ಅರಬ್ಬರು ಏಕೆ ಒಂದಾಗುತ್ತಿಲ್ಲ?

ಪ್ರಾರಂಭದಿಂದಲೂ ಈ ನವ ಯಹೂದಿ ರಾಷ್ಟ್ರದ ನೀತಿಗಳೆಲ್ಲಾ ಜನವಿರೋಧಿ, ಅರಬ್ ವಿರೋಧಿ ಮತ್ತು ಓರಿಯಂಟಲ್ ಯಹೂದಿಗಳ ವಿರೋಧಿಯೇ (-) ಆಗಿವೆ. ಅವು ಎತ್ತಿಹಿಡಿದದ್ದು ಆಂಗ್ಲೋ-ಅಮೆರಿಕನ್ ಹಿತಾಸಕ್ತಿಗಳನ್ನು ಮಾತ್ರ. ವಿಶ್ವಸಂಸ್ಥೆಯಲ್ಲಿ ಬಹುಪಾಲು ಸದಸ್ಯರ ಆಶಯಗಳು ಮೇಲುಗೈ ಸಾಧಿಸಲು ಆಂಗ್ಲೋ-ಅಮೆರಿಕನ್ ಬಣವು ಅವಕಾಶವೇ ಕೊಡಲಿಲ್ಲ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR